ಅಪರಂಜಿ

ಸೆಪ್ಟಂಬರ್
1990


ತಿಳಿನಗೆಯ ಕಾರಂಜಿ



- ಪ್ರಕಾಶ್
- ವಸಂತಕ
- ರಾಜರತ್ನಂ
- ಅ. ರಾ. ಸೇ.
- ನಾ. ಡಿಸೋಜ
- ಶೀನೂ
- ಜಿ. ಎನ್. ಜಿ.
- ಕೀಫ
- ಲಿಂಕ್ಸ್
- ನಳಿನೀಪ್ರಿಯ

ಬಿಡಿ ಪ್ರತಿ : 2 ರೂ. 50 ಪೈ.

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜೆನ್ಸೀಸ್

ಬೆಂಗಳೂರು



(ತಿಳಿನಗೆಯ ಕಾರಂಜಿ)

ಸಂಪುಟ ೭ | ಸೆಪ್ಟೆಂಬರ್ ೧೯೯೦ | ಸಂಚಿಕೆ ೧೨

ಸಾಮುದ್ರಿಕ

ಜೋಯಿಸನ ಪತಿಯೆದುರು ಕರೆವಳು
ಅವನ ಕಲಿತ ಮನೋರಮ
ಪತಿಯ ಅಂಗೈ ಗೆರೆಯ ತಿಳಿದು
ತನ್ನ ದುರ್ಭಾಗ್ಯವನು ಹಳಿದು
ಮರು ದಿನವೆ ತೆಗೆಯಿಸಿದಳಾತನ
ಇಡಿ ಇಡೀ ಜೀವನವಿಮೆ.

ಎ. ಜಿ. ಭಟ್ಟ
(ಕಾವ್ಯ ವೇದನೆ)

ಗೌರವ ಸಲಹೆಗಾರರು :	ಚಂದಾ ವಿವರ:	ವಿಳಾಸ :
ಶ್ರೀ ಅ. ರಾ. ಸೇ. ಶ್ರೀ ಶೇಷಗಿರಿ	ಬಿಡಿ ಪ್ರತಿ : 2 ರೂ., 50 ಪೈ. ವಾರ್ಷಿಕ ಚಂದಾ : 25 ರೂ.	ಅಪರಂಜಿ ಕಾರ್ಯಾಲಯ 36, 6ನೆಯ ಮುಖ್ಯ ರಸ್ತೆ ಮಲ್ಲೇಶ್ವರಂ ಬೆಂಗಳೂರು 560003
ಸಂಪಾದಕ : **ಶಿವಕುಮಾರ್**	ಆಜೀವ ಚಂದಾ : 250 ರೂ.	ಕೆಲಸದ ವೇಳೆ : ಬೆಳಗ್ಗೆ 8ರಿಂದ 10ರವರೆಗೆ ಮಾತ್ರ

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ : 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೭ ಸೆಪ್ಟಂಬರ್ ೧೯೯೦ ಸಂಚಿಕೆ ೧೨

ಅದನ್ನು ಹೇಗೆ ಹೇಗೆ ಉಪಾಸನೆ ಮಾಡುತ್ತಾರೆಯೋ ಅಂತಹದೇ ಫಲ ಸಿಗುತ್ತದೆ.

—ಶತಪಥ ಬ್ರಾಹ್ಮಣ

ಬ್ರಹ್ಮವನ್ನು ಸಿದ್ಧಿಗಳಿಗಾಗಿ ಉಪಾಸನೆ ಮಾಡಿದರೆ ಅದೇ ದೊರಕುತ್ತದೆ. ಕ್ರಮ ಮುಕ್ತಿಗಾಗಿ ಉಪಾಸನೆ ಮಾಡಿದರೆ ಬ್ರಹ್ಮ ಲೋಕವೂ, ಅಲ್ಲಿ ಜ್ಞಾನ ಉಂಟಾದರೆ ಮುಕ್ತಿಯೂ ದೊರಕುತ್ತವೆ. ಕರ್ಮ ಸಮೃದ್ಧಿಗಾಗಿ ಉಪಾಸನೆ ಮಾಡಿದರೆ ಹಾಗೆಯೇ ಆಗುತ್ತದೆ.

ಪ್ರಜಾ ಪ್ರಭುತ್ವದಲ್ಲಿಯೂ ಅಷ್ಟೇ. ಜನಸಾಮಾನ್ಯರ ಅಭಿವೃದ್ಧಿ, ಏಳಿಗೆ, ಶಾಂತಿ, ಐಕ್ಯ, ಸಮೃದ್ಧಿಗಳಿಗಾಗಿ ಅಧಿಕಾರವನ್ನು ವಿನಿಯೋಗಿಸಿದರೆ, ಅವೇ ಉಂಟಾಗುತ್ತವೆ. ಅಧಿಕಾರಕ್ಕಾಗಿ ಕಚ್ಚಾಡಿದರೆ ಕಚ್ಚಾಟವೂ, ಅಭದ್ರತೆಯೂ ತನ್ಮೂಲಕ ಕ್ಷೋಭೆಯೂ ಉಂಟಾಗುತ್ತವೆ. ಪ್ರಜೆಗಳ ಏಳಿಗೆಗಾಗಿ ಯತ್ನಿಸಿದರೆ ಅದೂ (ಇದು ಕೇವಲ ಸಿದ್ಧಾಂತದ ಮಾತು) ಪ್ರತಿನಿಧಿಗಳ ಏಳಿಗೆಗಾಗಿ ಯತ್ನಿಸಿದರೆ ಅದೂ ದೊರಕುತ್ತವೆ.

ರಾಷ್ಟ್ರದ ಏಳಿಗೆಗಾಗಿ ಯತ್ನಿಸಿದರೆ ಅದೂ, ಜಾತಿ, ಮತ, ಭಾಷಾದಿಗಳ ಉದ್ದೇಶವನ್ನಿಟ್ಟುಕೊಂಡರೆ ರಾಷ್ಟ್ರೀಯತೆಯ ಇಳಿಕೆಯೂ ಲಭಿಸುತ್ತವೆ. ಅಪ್ಪನನ್ನು ಅಪ್ಪ ಎಂದಾಗ ಸಂಸಾರ ಸುರಳೀತವಾಗುತ್ತದೆ. ಹಾದಿಯಲ್ಲಿ ಹೋಗುವ ಮಾರಿಯನ್ನು ಕರೆದರೆ ನಾಶ ಒದಗುತ್ತದೆ.

ರಾಜನೀತಿ ನೀತಿಯುತವಾಗಿದ್ದರೆ ಆ ರೀತಿ ಎನಿಸಿಕೊಳ್ಳುತ್ತದೆ. ದಂಡಿಯು ತಿಂದರೆ ಅಂಬಲಿಯೂ ಅಮೃತವಾಗುತ್ತದೆ. ಕಡ ತಂದು ತಿಂದರೆ ಹಸಿವು ಬೆನ್ನ ಹಿಂದೇ ಕಾದಿರುತ್ತದೆ.

ರಾಷ್ಟ್ರದ ನೀತಿಯೇನು ಎಂದು ನಿರ್ಧರಿಸಿ ರೂಪಿಸಿಕೊಂಡರೆ ಏಳಿಗೆ. ಊದುವುದನ್ನು ಕೊಟ್ಟು ಒದರುವುದನ್ನು ತಂದು, ಒದರುವುದನ್ನು ಕೊಟ್ಟು ಊದುವುದನ್ನು ತಂದರೆ........ 'ಇಂದು' ಘಟಿಸುತ್ತದೆ.



—ಪ್ರಕಾಶ್

ಎನ್ನಾರೈ ಎಂದು ಸಂಭ್ರಮಪಡುತ್ತಿದ್ದ ಕರ್ನಾಟಕದ ಹಿರಿಯರೊಬ್ಬರು ಈಗ ಎನ್ನವರಾರೈ ಎಂದು ತಿರುಗುತ್ತಿದ್ದಾರಂತೆ !

O O

ಇದ್ದೊಬ್ಬ ಮಗನನ್ನು ಅಮೆರಿಕಕ್ಕೆ ಕಳುಹಿಸಿ ಕುಳಿತಿರುವ ಮುದುಕರೊಬ್ಬರೂ ಸಹ ಇದೇ ಮಾತನ್ನು ಹೇಳುತ್ತಿರುವ ಸುದ್ದಿ ನಿಜವಲ್ಲವಂತೆ !

O O

ಅಮೆರಿಕದಲ್ಲಿರುವ ಆ ಸದರಿ ಮಗನೂ ಈ ಪಲ್ಲವಿಯನ್ನೇ ನುಡಿಯುತ್ತಿದ್ದಾನೆಂಬುದು ತೀರಾ ಕುಚೋದ್ಯದ ಮಾತು !

O O

ಏಡ್ಸ್ ರೋಗದ ತಪಾಸಣೆಗೆ Western Blot ಎಂಬ ಪರೀಕ್ಷೆ ಉಪಯೋಗಿಸುತ್ತಾರಂತೆ.

—ಸುದ್ದಿ

ವಿದೇಶೀ ಕೈವಾಡ !

O O

ಪ್ರಥಮ ಏಷ್ಯಾ ಹಗ್ಗ-ಜಗ್ಗಾಟದ ಪಂದ್ಯ ಜಪಾನ್‌ನಲ್ಲಿ.

—ಕ್ರೀಡಾ ಸುದ್ದಿ

ಇದು ದೆಹಲಿಯಲ್ಲಿ ನಡೆಯುವುದು ಸೂಕ್ತವಲ್ಲವೆ ?

O O

ದೇವಿಲಾಲ್ ಪದಚ್ಯುತಿ

—ಸಂದ್ರಿ

ವಿನಾಶಕಾಲೇ ವಿಪರೀತ ಬುದ್ಧಿಃ !

O O

ಏನೇ ಬೋರೀ ತಾರಾಟ ಅಂದರೆ,
ದೇವಿಲಾಲ್ ಮನೇಲಿ ರೈತರೂಟ ಅಂದಳಂತೆ !

O O

ಮದ್ದೂರು ವಡೆ ಮಿಕ್ಸ್; ವೈಜ್ಞಾನಿಕವಾಗಿ ತಯಾರಿಕೆ

ಸುದ್ದಿ

ಅದರ ರುಚಿಯೂ 'ವೈಜ್ಞಾನಿಕ'ವಾಗಿರಬಹುದು !

O O

ನಾನು ಪ್ರಯಾಣ ಮಾಡುವ ರೈಲುಗಳು ವೇಳೆಗೆ ಸರಿಯಾಗಿ ಚಲಿಸುತ್ತವೆ.

—ಮಾಜಿ ರೈಲ್ವೆ ಮಂತ್ರಿ ಸಿಂಧಿಯಾ

ಇದಕ್ಕೆ ಅವರು 'ಮಾಜಿ' ಆಗಿದ್ದೇ ಕಾರಣವೆ ?

O O

ನನಗೆ ಉಜ್ವಲವಾದ ಭವಿಷ್ಯವಿದೆ.

—ಶ್ರೀ ಚೌತಾಲಾ

ನಮಗೂ ಅದೇ ಭಯ ! !

O O

ಸಾಮಾಜಿಕ ಕೀಟಗಳ ಸೂಕ್ಷ್ಮ ಅಧ್ಯಯನಕ್ಕೆ ಸಚಿವರ ಕರೆ.

—ಪತ್ರಿಕೆ

ರಾಜಕಾರಣಿಗಳನ್ನು ತೀರ ಹೀಗೆ ಸಂಬೋಧಿಸಬಹುದೆ ?

O O

ಬೇನಜೀರ್ ಸರ್ಕಾರ ವಜಾ ; ತಂತ್ರ ಪರಿಸ್ಥಿತಿ.

—ಸುದ್ದಿ

ಪರವಾಗಿಲ್ಲ, ಪಾಕಿಸ್ತಾನದಲ್ಲೂ ಪ್ರಜಾಪ್ರಭುತ್ವ ಮುಂದುವರಿಯುತ್ತಿದೆ !

6

ಕಮ್ಯುನಿಸಂ ಏಕೆ ಕುಸಿಯಿತು ?

— ವಸಂತಕ

ಈ ಪ್ರಶ್ನೆ ಸರಿಯೇ ಎನ್ನುವುದನ್ನು ಪರೀಕ್ಷಿಸಿದರೆ ಪ್ರಶ್ನೆ ಏಳುವುದಿಲ್ಲ ಎಂದೂ ತೀರ್ಮಾನಿಸಬಹುದು. ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಅದೇನೂ ಕುಸಿದಿಲ್ಲ. ಮಂಗೋಲಿಯಂದ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಬಹುಮತ ಪಡೆದಿದ್ದಾರೆ. ಚೀನಾ, ವಿಯಟ್ನಾಂಗಳಲ್ಲಿ ಅದು ದೃಢವಾಗಿಯೇ ಇದೆ. ತಿಯನನ್‌ಮನ್ ಚೌಕ ಕೇವಲ ಪ್ರಗತಿ ವಿರೋಧಿಗಳ ಸಂಚು. ಮಧ್ಯಂತರ ಕ್ಷಿಪಣಿ ಹೋದರೆ I.C.B.M. ಇವೆ. ಜರ್ಮನಿ NATO ಸೇರಿದರೆ ಆಯಾಸವಿಲ್ಲದೆ ಬೇಹುಗಾರಿಕೆ ಆಗುತ್ತದೆ. ಪೂರ್ವ ಯುರೋಪಿನಲ್ಲಿ, ಕಮ್ಯುನಿಸಂ ಕುಸಿದಿದೆ, ನಿಜ. ಆದರೆ ಅಲ್ಲಿನ ತೆಳ್ಳಿ ನಮಗೇಕೆ ?

ರಷ್ಯದ 'ಪೆರೆಸ್ತ್ರೋಯ್ಕ' ಮತ್ತು 'ಗ್ಲಾಸ್‌ನೋಸ್ತ್' ಜಾರಿಗೆ ಬಂದ ಮೇಲೆ ಅಲ್ಲಿ ಏನೇನೂ ಸಿಗುತ್ತಿಲ್ಲ ಎಂದು ಅಲ್ಲಿದ್ದವರು ಹೇಳುತ್ತಾರೆ. ರಷ್ಯದಲ್ಲಿ ಪೆರೆಸ್ತ್ರೋಯ್ಕ ನಿಜಕ್ಕೂ ಏನನ್ನು ಸೂಚಿಸುತ್ತದೆ ? ನನ್ನ ಮಿತ್ರರೊಬ್ಬರು ಹೇಳುವಂತೆ, ವಿರೋಧಿಗಳನ್ನು ಗುರುತಿಸಿ, ಅವರೇ ರಾಜೀನಾಮೆ ಕೊಡುವಂತೆ ಮಾಡುವಲ್ಲಿ ಅದು ಫಲಕಾರಿಯಾಗಿದೆ.

ಪೋಲೆಂಡ್, ಜೆಕೊಸ್ಲೊವಾಕಿಯ, ಹಂಗೆರಿ ಮೊದಲಾದೆಡೆಗಳಲ್ಲಿ ಇದ್ದುದು ಕಮ್ಯುನಿಸಂ ಅಲ್ಲ, ರಷ್ಯದ ಟ್ಯಾಂಕುಗಳು ಎನ್ನುತ್ತಾರೆ ಕುಹಕಿಗಳು. ಡುಬ್‌ಚೆಕ್ ನೆನಪಿದ್ದಾರೆಯೇ ?

ಜರ್ಮನಿಯ ಏಕೀಕರಣ ಖಚಿತವಾಗಿತ್ತು, ಆಯಿತು. ರುಮೇನಿಯಾ, ಕಮ್ಯುನಿಸಮಿನ ಫಿಲಿಪೀನ್ಸ್ ಅಥವಾ ಫಿಲಿಪೀನ್ಸ್ ಪ್ರಜಾಪ್ರಭುತ್ವದ ರುಮೇನಿಯಾ, ಅಲ್ಲವೇ ?

ಹೀಗೆಲ್ಲಾ ಹೇಳುತ್ತಿರುವುದು ರಾಜಕೀಯ ವಿಶ್ಲೇಷಣೆಯಲ್ಲ. ಮೇಲ್ನೋಟದಿಂದ ಉಂಟಾದ ಅನಿಸಿಕೆ.

ಎಲ್ಲಿಯೇ ಆಗಲಿ, ಕಮ್ಯುನಿಸಂ ಏಕೆ ಕುಸಿಯಿತು ಎಂಬ ಪ್ರಶ್ನೆಗೆ ಹಲವಾರು ಉತ್ತರಗಳಿವೆ. ಅವರಿವರು ಹೇಳಿದ್ದನ್ನು ಕೇಳೋಣ.

ಮೊದಲನೆಯದಾಗಿ ಕಮ್ಯುನಿಸಂ ಎಂದರೆ ಮಾರ್ಕ್ಸ್ ಹೇಳಿದ್ದೇ ? ಲೆನಿನ್, ಸ್ಟಾಲಿನ್, ಮಾವೋ, ಬ್ರೆಜ್ನೇವ್, ಹೆಗ್ಗಣ್ಣ ಮೊದಲಾದವರು ಹೇಳಿದ್ದೇ ? ಮಾರ್ಕ್ಸ್

ಹೇಳಿದ್ದಾದರೂ ಏನು ? ಪ್ರಜಾಪ್ರಭುತ್ವ ಹೇಗೆ ಪ್ರಜೆಗಳ ಪ್ರಭುತ್ವವಲ್ಲವೋ, ಹಾಗೆಯೇ ಕಮ್ಯೂನಿಸಂ ಸಮತೆಯ ರಾಜ್ಯವಲ್ಲ ಎಂದು ಊಹಿಸಬಹುದು. ಬಂಡವಾಳಶಾಹೀ ದಬ್ಬಾಳಿಕೆಯ ಬದಲು ಕಮ್ಯುನಿಸ್ಟ್ ಪಾರ್ಟಿಯ ದಬ್ಬಾಳಿಕೆಯೇ ಕಮ್ಯೂನಿಸಮ್ಮೇ ? ಹೇಳುವವರು ಯಾರು ?

ಇನ್ನೊಂದು ಮುಖ್ಯವಾದ ಅಂಶವನ್ನು ಗಮನಿಸಬೇಕು. ಭೌತಶಾಸ್ತ್ರದಲ್ಲಿ, ಪ್ರಯೋಗ ಅನಾಹುತಕ್ಕೆ ಎಡೆಮಾಡುತ್ತದೆ. ರಾಜಕೀಯದಲ್ಲಿ ಸಿದ್ಧಾಂತ, ಪ್ರಯೋಗಗಳೆರಡೂ ಅನಾಹುತಕ್ಕೆ ಎಡೆಮಾಡಿಕೊಡುತ್ತವೆ.

ಭಾರತೀಯ ಕಮ್ಯುನಿಸ್ಟರನ್ನು ಯೂರೋಪಿನವರು ರಿಫಾರ್ಮಿಸ್ಟ್‌ಗಳೆಂದು ತಿರಸ್ಕರಿಸುತ್ತಾರೆ. ಭಾರತೀಯ ಕಮ್ಯುನಿಸ್ಟರು, ಅಸಲೀ ಕಮ್ಯುನಿಸ್ಟರನ್ನೇ ಕಮ್ಯುನಿಸ್ಟ್ ಬಾಹಿರರೆಂದು ಕರೆಯುತ್ತಾರೆ. ಅಲ್ಲದೆ ನಕ್ಸಲೀಯತೆಗೆ ಮುಖಕ್ಕೆ ಮುಖ ಕೊಟ್ಟು ನೋಡುವುದಿಲ್ಲ. ಕಮ್ಯುನಿಸಂನ ತತ್ತ್ವಗಳನ್ನು ಬೇರೆ ಬೇರೆಯವರು ಬೇರೆ ಬೇರೆ ರೀತಿ ನೋಡುವುದರಿಂದ, ಅದು ಮೂಲಭೂತ ಹಕ್ಕುಗಳಿಲ್ಲದ ಪ್ರಜಾಪ್ರಭುತ್ವ ಎನ್ನಿಸಿಕೊಳ್ಳುತ್ತದೆ.

ಇರಲಿ. ಯಾಂಕಿಗಳು, ರೇಗನ್ನನ ಬಿಗಿಮುಷ್ಟಿ ಕಮ್ಯುನಿಸಂನ ಕುಸಿತಕ್ಕೆ ಕಾರಣ ಎನ್ನುತ್ತಾರೆ. ಜಿಲಾಸ್ ಮಹಾಶಯನು ಕಮ್ಯುನಿಸಂ ತನ್ನಿಂದಲೇ ಕುಸಿಯಿತು ಎನ್ನುತ್ತಾನೆ. ಕಮ್ಯುನಿಸ್ಟ್ ಪ್ರಭುಗಳು ಪ್ರಜೆಗಳ ಸಂಪರ್ಕವನ್ನು ಕಡಿದುಕೊಂಡು ತಮ್ಮದೇ ಸಾಮ್ರಾಜ್ಯ ಕಟ್ಟಿಕೊಂಡರು ಎನ್ನುತ್ತಾನೆ. ಹೆಚ್ಚು ಕಡಿಮೆ ಪ್ರಜಾಪ್ರಭುತ್ವಗಳಲ್ಲಿ ಹೊಸದಾಗಿ ಆರಿಸಿ ಬಂದವರೆಲ್ಲರೂ ಹಿಂದಿನವರನ್ನು ಕುರಿತು ಹಾಗೇ ಹೇಳುತ್ತಾರೆ.

ಮಿಖಾಯಿಲ್ ಗೋರ್ಬಚೇವ್ ಪ್ರಯೋಜನವಾದಿ ಎಂಬ ಪ್ರಶಂಸೆಯೂ ಇದೆ. ಪ್ರಯೋಜನವಾದವು ಯಾಂಕೀ ಬಂಡವಾಳಶಾಹಿಯ ತತ್ತ್ವ. ಇಂಗ್ಲಿಷಿನಲ್ಲಿ ಅದನ್ನು ಪ್ರಾಗ್ಮ್ಯಾಟಿಸಂ ಎನ್ನುತ್ತಾರೆ. ಹಾಗೆ ಎಂದರೆ ಏನು ? ಅದು ಭಾರತದ ಆಡಳಿತದ ಎಲ್ಲ ಸ್ತರಗಳಲ್ಲೂ ಇದೆ ಎನ್ನುತ್ತಾರೆ. ಪ್ರಾಗ್ಮ್ಯಾಟಿಸಂ ಅನ್ನು What is my percentage ? ಎಂಬ ಪ್ರಶ್ನೆಯಿಂದ ಅರ್ಥೈಸುತ್ತಾರೆ.

ಹೀಗೆಲ್ಲಾ ಇರುವುದರಿಂದ ಕಮ್ಯುನಿಸಂ ಕುಸಿಯಲು ಮೂರು ಮುಖ್ಯ ಕಾರಣಗಳನ್ನು ಸೂಚಿಸಬಹುದು :

1. ಎಲ್ಲ ಒಳ್ಳೆಯದಕ್ಕೂ, ಕೆಟ್ಟದಕ್ಕೂ ಒಂದು ಕೊನೆ ಇದೆ.

2. ಕಮ್ಯೂನಿಸ್ಟ್ ರಾಷ್ಟ್ರಗಳು ಕುಸಿದ ಕಾಲದಲ್ಲಿ ಗ್ರಹಗಳ ಪಕ್ಷಾಂತರಚಾರವೇ ಇದಕ್ಕೆ ಕಾರಣ.

3. ಹೋದ ವರ್ಷ ಒಂದು ದಿನ ನಮ್ಮೂರಿನ ದೇವಸ್ಥಾನ ಒಂದರಲ್ಲಿ ಬೆಳಗ್ಗೆ ಎಂಟು ಗಂಟೆಗೇ ಪೂಜೆ ಆಯಿತು. ಊರವರೆಲ್ಲಾ ಏನೋ ಆಗುತ್ತದೆ ಎಂದು ಮಾತಾಡಿಕೊಂಡರು. ಆ ಉತ್ಪಾತ ಯೋಗದಿಂದ ಕಮ್ಯೂನಿಸಂ ಕುಸಿಯಿತು.

ಆದರೆ ನಿಜವಾದ ಕಾರಣ ಇದೋ ಇಲ್ಲಿದೆ :

1989ರ ಆರಂಭದಲ್ಲಿ ನಮ್ಮೂರಿಗೆ ಒಂದು ಎಲೆಕ್ಟ್ರಿಕ್ ಸಬ್ ಸ್ಟೇಷನ್ ಬಂತು. ಅದು ಬಂದ ದಿನದಿಂದ ಒಂದು ವಾರವೂ, ನಾವು ಕನ್ನಡ ಚಿತ್ರಮಂಜರಿಯನ್ನಾಗಲೀ, ಸಿನಿಮಾವನ್ನಾಗಲೀ, ಹಿಂದೀ ಸಿನಿಮಾವನ್ನಾಗಲೀ ಪೂರ್ತಿ ನೋಡಲು ಆಗಲೇ ಇಲ್ಲ. ಎಲೆಕ್ಟ್ರಿಕ್ ಕೊಂಡಿ ಟ್ರಿಪ್ ಆಗುತ್ತಿತ್ತು. ಆದರೆ ವರ್ಷ ತೊಡಕಿನ ದಿನ ಕರೆಂಟ್ ಹೋಗಲೇ ಇಲ್ಲ. ಆ ದಿನ ಪಂಚಾಂಗ ಶ್ರವಣವಾದ ಮೇಲೆ ನಾನು ವಂದನಾರ್ಪಣೆ ಮಾಡುತ್ತಾ, ಈ ದಿನ ಕರೆಂಟ್ ಹೋಗಲೇ ಇಲ್ಲ. ಆದುದರಿಂದ ಹೊಸ ವರ್ಷದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಆಗಲು ಸಾಧ್ಯವಿಲ್ಲದ್ದು ಆಗಿಯೇ ಬಿಡುತ್ತದೆ ಎಂದು ಭವಿಷ್ಯ ನುಡಿದಿದ್ದೆ. ಕಮ್ಯುನಿಸಂ ಕುಸಿಯಿತು. ಈ ತಹಲ್‌ವರೆವಿಗೂ ನಾವು ಚಿತ್ರಮಂಜರಿ, ಸಿನಿಮಾ ಇವಾವುದನ್ನೂ ಪೂರ್ತಿ ನೋಡಲಾಗಿಲ್ಲ.

ಹಣಗಳಿಸಲು ಪ್ರಯತ್ನಿಸಿ ಆರೋಗ್ಯ ಕೆಡಿಸಿಕೊಂಡ ಅನೇಕರು ಆರೋಗ್ಯವನ್ನು ತಿರುಗಿ ಪಡೆಯಲು ಅದೇ ಹಣವನ್ನು ಕೆಡಿಸುತ್ತಿರುವರಂತೆ.

9

ಕೊರವಂಜಿಯಿಂದ



ಕ್ಯೂ – ಕ್ಯೂಊ – ಕ್ಯೂಊಊ!!!

—ರಾಜರತ್ನಂ

ಮೊನ್ನೆ ಸಾಯಂಕಾಲ ಮನೇಗೆ ಬರತಾ ಹಾಗೇ ಬಲಗಡೆ ನಮ್ಮ ಬಟ್ಟೇ ಕೂಪನ್ ಅಂಗಡಿ ಹತ್ತರ ಒಂದು ಬೋರ್ಡ್ ನೋಡಿದೆ. "ನಾಳೆ ಬೆಳಗ್ಗೆ ರೇಷನ್ ಪಂಚೆ ಕೊಡುತ್ತೇವೆ" ಅಂತ ಅದರ ಮೇಲೆ ಬರೆದ ಹಾಗೆ ಇತ್ತು. ಯಾವು ಧಾದರೂ ಕೇಳಿಯೇ ಖಂಡಿತ ಮಾಡಿಕೊಳ್ಳೋಣ ಅಂತ ಅಂಗಡಿಯವನ್ನ ಕೇಳಿದೆ. 'ಬೆಳಿಗ್ಗೆ ಯೇಳು ಗಂಟೆ ಹೊತ್ತಿಗೆಲ್ಲಾ ಬೇಗನೆ ಬಂದುಬುಡಿ' ಅಂದ ಅಂಗಡಿ ಯೋನು. "ಸರಿ. ಇವನು ಹೇಳಿದ ಹಾಗೆ ಯೇಳು ಗಂಟೆ ಹೊತ್ತಿಗೆ ಬಂದರೆ ಯೇಳುಬೇಕಾದ್ದೇ ಇಲ್ಲ—ಇವನಂಗಡಿ ಮುಂದೆ ಮುತ್ತಿಕೊಳ್ಳೋ ಇರುವೆ ಸಾಲಿನ ಕ್ಯೂನ" ಅಂತ ಮನಸಿನಲ್ಲೇ ಅಂದುಕೊಂಡು ಮನೇಗೆ ಬಂದೆ. ಬಂದವನೇ, ಎಂಟು ಗಂಟೆ ಒಳಗಾಗಿ ಒಂದಾ ಊಟದ ಶಾಸ್ತ್ರ ಮುಗಿಸಿಕೊಂಡು. "ಏನೇ, ನಾಳೆ ಬೆಳಗ್ಗೆ ಪಂಚೆ ಕ್ಯೂ ಅಂತೆ. ಅವನೇನೋ ಏಳು ಗಂಟೆಗೆ ಬಂದರೂ ಪರವಾ ಇಲ್ಲ, ಅಂದ. ಆದರೆ ನಾನೇನೋ ನಾಕೂವರೆ ಗಂಟೆಗೆಲ್ಲಾ ಅಲ್ಲಿ ಹೋಗಿ, ಅವನ ಅಂಗಡಿ ಮುಂದೆ ಝಂಡಾಹಾಕಿ ಬಿಡಬೇಕೂ ಅಂತಿದೀನಿ. ಅಲಾರಂ ಇಟ್ಟಿದೀನಿ ಮಧ್ಯೆ ನನ್ನ ಎಬ್ಬಿಸಬೇಡ" ಅಂತ ಹೇಳಿ, ಹಾಗೇ ಒಂದು ಕತೆ ಪುಸ್ತಕ ಕೈಲಿ ಹಿಡುಕೊಂಡು ದಿಂಬಿಗೆ ತಲೆ ಕೊಟ್ಟೆ.

ನಾಲ್ಕು ನಾಲ್ಕೂವರೆ ಹೊತ್ತಿಗೆಲ್ಲಾ ಎದ್ದು, ಹಲ್ಲು ಕೂಡ ಉಜ್ಜದೆ ಎದ್ದು ಹೋಗಿ ನೋಡತೇನೆ—ಆ ಬಟ್ಟೇ ಅಂಗಡಿ ಮುಂದೆ. ಈಚೆ ಪಕ್ಕದಲ್ಲಿ ಹದಿನೈದು ಜನ, ಆಚೆ ಪಕ್ಕದಲ್ಲಿ ಹದಿನೆಂಟು ಜನ ಚಾಪೆ, ಜಮಖಾನ, ಹಾಸಿಗೆ ಬಿಡಿಸಿ ಕೊಂಡು, ಧಿಂರಂಗ ಅಂತ ಬಿದ್ದುಕೊಂಡು ಗೊರಕೆ ಹೊಡೀತಾ ಇದ್ದಾರೆ !

ನೋಡಿದೆ. "ಸರಿ ಬೆಳಗಿನ ಜಾವದ ಚಳೀಲಿ ಯಾರು ಯಾರು ಬರ ಬಹುದೋ ಅವರೆಲ್ಲಾ ರಾತ್ರೆಯೇ ಬಂದಾಗಿದೆ. ಇವರ ಮಧ್ಯೆ ಎಲ್ಲಾದರೂ ಇವ ರಿಗೆ ಕಾಣದ ಹಾಗೆ ತೂರಿಕೊಂಡಿರೋಣ ಅಂದರೆ, ಮೊದಲು ಬಂದು ಮಲಗಿದವನ ಕಾಲಿಗೆ ಆಮೇಲ ಬಂದು ಮಲಗಿದವನು ತಲೆ ಸಿಕ್ಕಿಸಿಕೊಂಡು ಬಿದ್ದಿದ್ದಾನೆ.

ಒಳ್ಳೇದು. ಇಲ್ಲಿ ಚಳೀಲಿ ಕೂತು ಏಳು ಗಂಟೇವರೆಗೂ ಒಣಗೋಕಿಂತ, ಆ ಪಕ್ಕ ದಲ್ಲಿ ದೀಪ ಹತ್ತಿಸಿದ್ದಾನಲ್ಲ ಆ ಅಂಜನೇಯ ಭವನದಲ್ಲಿ ಮುಖಕ್ಕೆ ಇಷ್ಟು ನೀರು ಚಿಮುಕಿಸಿಕೊಂಡು, ಕಾಪೀಗೆ ಇಷ್ಟು ಕಾಪಿ ಹುಯಿದುಕೊಂಡು ಬರೋಣ" ಅಂದುಕೊಂಡವನೇ ಆ ಕಡೆ ಹೊರಟೆ.

ಕಲಿಗಾಲ ! ಕಡಲಿಗೆ ಹೋದರೂ ಕಾಲುದ್ದಾನೇ ನೀರು ! ಆಂಜನೇಯಂ ರಮಾರಮಣ ಗೋವಿಂದಾ ಗೋವಿಂದ ! ಕಾಪೀಗೂ ಕ್ಯೂನೇ ! ಬೆಳಗಿನ ಜಾವ ನಾಕೂವರೆ ಗಂಟೇಗೇ !

ಸರಿ. ಮುಖ ತೊಳಕೊಳ್ಳೋಣ ಅಂತ ನಲ್ಲೀ ಹತ್ತಿರ ಹೋದೆ. ಹೇಳಿದರೆ ನಂಬತೀರೋ ಇಲ್ಲವೋ—ಈ ಕೊರೆಯೋ ಚಳೀಲಿ ತಣ್ಣೀರು ನಲ್ಲೀ ಹತ್ತಿರಾನೂ ಕ್ಯೂ ಅಂದರೆ ಏನು ಹೇಳೋಣ !

ನುಗ್ಗಿ ಹೋಗಿ ಕ್ಯೂ ಕೆಡಿಸಿಬಿಡೋಣವೆ ಅಂತ ಒಂದು ಅರ್ಧ ನಿಮಿಷ ಮನಸ್ಸು ದಂಗೆಯೆದ್ದಿತು ಆದರೆ ನನ್ನ ಮುಂದೆ ಖಾಕಿ ಬಟ್ಟೆ ಹಾಕಿಕೊಂಡು ಒಬ್ಬ ಮಿಲಿಟರಿ ನಿಂತಿದ್ದ. ಪಾಪ, ಎಷ್ಟು ಹೊತ್ತಿಂದ ನಿಂತಿದಾನೋ ಏನೋ ಕೇಳೋಣ ಅಂತ, ಮೆಲ್ಲಗೆ ' ರೀ ' ಅಂದೆ ಆತ 'ಅಬೌಟ್ ಟರ್ನ್' ಅಂದ ಹಾಗೆ ತಿರುಗಿದ. ನೋಡಿದರೆ—ಯಾರು ಇವನೇ ! ನಂ ಕಸಕಟ್ಟೆಕಾಯಿ ಕಿಟ್ಟು ! ನಂ ಸೀಬೆಮರಕ್ಕೆ ಹತ್ತಿ ನನ್ನ ಕೈಲಿ ಒದೆ ತಿಂದವನು !

' ಇವನಿಗೆ ಹೆದರ್ಕೊಂಡು ಕ್ಯೂ ಮುರೀದೇ ಬಿಟ್ಟೆನಲ್ಲ ನಾನು ! ' ಅಂತ ಪಶ್ಚಾತ್ತಾಪಪಡುತ್ತಾ, " ಏನೇ ಆದರೂ ಮಿಲಿಟರಿ ಬಟ್ಟೆ ಮಿಲಿಟರಿ ಬಟ್ಟೇನೇ " ಅಂತ ಸಮಾಧಾನಪಟ್ಕೊಳ್ತಾ " ಏನಯ್ಯಾ ಕಿಟ್ಟಿ ? ಇದೇನಿಲ್ಲಿ ? " ಅಂದೆ.

ಮಿಲಿಟರಿ ಆದರೂ ಕಿಟ್ಟಿ ನಾನು ಕೇಳಿದ್ದಕ್ಕೆ ಜವಾಬು ಹೇಳಿದ. ಅವನು ವಿಮಾನದಳದಲ್ಲಿ ಕೆಲಸದಲ್ಲಿ ಇದ್ದಾನಂತೆ. ಅವರ ಕಂಪನೀಗೆ " ದೊಡ್ಡಕೋಟ " ಅಂತ ಒಂದು ಹೊಸಾತರ ವಿಮಾನ ಬಂದಿದೆಯಂತೆ. ಅದನ್ನ ಅವತ್ತೇ ಬೆಳಗ್ಗೆ ಐದು ಗಂಟೆಗೆ ನಮ್ಮೂರಿಂದ ಹೊರಡಿಸಿಕೊಂಡು ಹೋಗಿ, ಅಮೆರಿಕಾ, ಇಂಗ್ಲೆಂಡು, ಜರ್ಮನಿ, ರಷ್ಯ, ಜಪಾನು ಇವುಗಳನ್ನೆಲ್ಲಾ ಮುಟ್ಟಿ, ಹತ್ತು ಗಂಟೆ ವೇಳೆಗೆ ನಮ್ಮೂರಿಗೇ ಹಿಂದಿರುಗಬೇಕಂತೆ.

" ನೀನೂ ಬರತೀಯಾ ಒಂದು ರೌಂಡು ! ಬಿಟ್ಟಿ ಟ್ರಿಪ್ಪು ? ನೋಡು !" ಅಂದ ಕಿಟ್ಟಿ.

ಕೈ ಗಡಿಯಾರ ನೋಡಿದೆ. "ಐದು ಗಂಟೆಗೆ ಹೊರಡಬೇಕು ಅಂತೀಯ. ಐದಕ್ಕೆ ಐದು ನಿಮಿಷ ಇದೆ. ಇನ್ನೂ ಮುಖಾನೂ ತೊಳೆದಿಲ್ಲವಲ್ಲ", ಅಂದೆ.

"ಹಾ ! ಹಾಗೇ ? ಮುಖದ ಮನೆ ಹಾಳಾಯ್ತು. ಬಾ" ಅಂದವನೇ ಎಡಗೈಲಿ ನನ್ನೂ ಹಿಡಿದು ಎಳಕೊಂಡು ಓಡಿದ. ಹೊರಗಡೆ ಹೋಟಲು ಪಕ್ಕದ ಜಟಕಾ ಸ್ಟಾಂಡಿನಲ್ಲಿ ಅವನ "ದೊಡ್ಡಕೋಟ" ನಿಂತಿತ್ತು. ಕಿಟ್ಟಿ ನನ್ನೂ ಎಳಕೊಂಡು, ಒಳಗೆ ಕೂತು, ಯಾವುದೋ ಮೂರು ನಾಕು ಗುಂಡಿ ಒತ್ತಿದ. ದೊಡ್ಡ ಕೋಟ ನೆಲ ಬಿಟ್ಟು ಹೊರಟಿತು.

ಅದೇನು ವಾಯುವೇಗವೋ, ಅದೇನು ಮನೋವೇಗವೋ, ಆ ದೊಡ್ಡ ಕೋಟದ ಧನುರ್ವೇಗ ! ನಮ್ಮೂರು ಬಿಟ್ಟು ಇನ್ನೂ ಹತ್ತು ನಿಮಿಷ ಇಲ್ಲ--ಆಗಲೇ "ಅಮೇರಿಕಾ !" ಅಂತ ಕೂಗಿದ ಕಿಟ್ಟಿ !

ಕೆಳಗೆ ನೋಡಿದರೆ ನಿಜವಾಗಿಯೂ ಅಮೇರಿಕಾವೇಯೆ ! ನಾನು ಭೂಗೋಳದ ಪುಸ್ತಕದಲ್ಲಿ ಓದಿದ ಹಾಗೆಯೇ--ತದ್ರೂಪು, ತದ್ವತ್ತು, ತತ್‌ಥತ್ತು !

"ಇದೇನಯ್ಯಾ, ಇಲ್ಲೂ ಕ್ಯೂನೇ ? ಇದೇನಿದು ? ಬಂದೂಕ ಪಿಸ್ತೂಲು ಇಟ್ಕೊಂಡು ಹೊಡೆದಾಡತಾ ಇದ್ದಾರಲ್ಲ ?"! ಅಂದೆ.

"ಅಮೇರಿಕಾದಲ್ಲಿ ಹೀಗೇನೆ. ಕ್ಯೂ ಪದ್ಧತಿಗೆ ಇವರೇ ಪಿತಾಮಹರು. ಅವರೇನು—ನಮ್ಮ ಹಾಗೆ ಸುಮ್ಮನೆ ಕ್ಯೂ ನಿಲ್ತಾರೇನು? ಹೊತ್ತು ಹೋಗೋದು ಹ್ಯಾಗೆ ? ಅದಕ್ಕೋಸ್ಕರ ಪಿಸ್ತೂಲು ಬಂದೂಕ ಇಟ್ಕೊಂಡು ಹೊಡೆದಾಡತಾ ಆಟವಾಡತಾ ಇದ್ದಾರೆ. ಹುಂ. ನಮಗ್ಯಾಕೆ ಇದೆಲ್ಲಾ. ಬಾ. ಮುಂದೆ ಇಂಗ್ಲೆಂಡಿಗೆ ಹೋಗೋಣ" ಅಂದ ಕಿಟ್ಟಿ.

ಇಂಗ್ಲೆಂಡಿಗೆ ಬಂದೆವು. ಬಂದರೆ, ಅಲ್ಲೂ ಒಂದೊಂದು ಅಂಗಡಿ ಮುಂದೂ ಅಸಾಧ್ಯವಾದ ಕ್ಯೂ. ಕೆಲವರು ಕುರ್ಚಿ ಕಾಲುಮಣೆ ತಂದುಕೊಂಡು ಕುಳಿತಿದ್ದಾರೆ. ಕೆಲವರು ನಿಂತುಕೊಂಡು ಒಬ್ಬರಿಗೊಬ್ಬರು ಖುಷಿಯಾಗಿ ಕತೆ ಹೇಳ್ತಾ ಕೇಕೆ ಹಾಕಿಕೊಂಡು ನಗತಾ ಇದ್ದಾರೆ. ನೋಡಿದರೆ ಅದೇನೂ ಕ್ಯೂ ಇದ್ದ ಹಾಗೇ ಇಲ್ಲ, ವನಭೋಜನದ ಪಂಕ್ತಿ ಇದ್ದ ಹಾಗೆ ಇತ್ತು.

" ಹುರ್ರೇ ಇಂಗ್ಲೆಂಡ್ !" ಅಂತ ಒಂದು ಕೂಗು ಹಾಕಿ ಜರ್ಮನಿಗೆ ಬಂದು ನೋಡಿದರೆ _ಆ ದೇಶದ ತುಂಬ ಎಲ್ಲಿ ಹುಡುಕಿದರೂ ಒಂದು ಕಣ್ಣಿನ ನೋಟ ನಾಟುವುದಕ್ಕೆ ಕೂಡ ಜಾಗವಿಲ್ಲದ ಹಾಗೆ ಉದ್ದುದ್ದ ಕ್ಯೂ, ಅಡ್ಡಡ್ಡ ಕ್ಯೂ,

ದಶದಿಕ್ಕುಗಳಲ್ಲಿಯೂ ಕ್ಯೂ ! " ಹೋಗಲಿ. ಇಷ್ಟು ಜನ ಕ್ಯೂ ನಿಂತರೂ ಇವರಿಗೆಲ್ಲಾ ಆಗುವಷ್ಟು ಪದಾರ್ಥ ಜರ್ಮನಿಯಲ್ಲಿ ಇನ್ನೂ ಇದೆಯಲ್ಲಾ ! " ಎಂದೆ. ಅದಕ್ಕೆ ಕಿಟ್ಟಿ " ಅಯ್ಯೋ ಬೆಪ್ಪೆ ! ಇದು ಅದಕ್ಕಲ್ಲ ಕಣೊ ಕ್ಯೂ. ಇದು ಇವರಿಗೆ ಒಂದು ಕಡ್ಡಾಯದ ಮಿಲಿಟರಿ ಶಿಕ್ಷಣ. ಕ್ಯೂ ನಿಲ್ಲಬೇಕು ಅಂತ ಅಂದರೆ, ಕಾಲು ಕೊಳತು ಹುಳು ಬಿದ್ದರೂ ಕ್ಯೂ ನಿಲ್ಲಲೇಬೇಕು. ಜರ್ಮನಿ ಅಂದರೆ ಅದು ! " ಅಂತ ಹೇಳತಾ " ಆ ಕ್ಯೂ ಹಾಗಿರಲಿ. ಇಲ್ಲಿ ನೋಡು ರಷ್ಯಾದಲ್ಲಿ " ಅಂದ.

ಎಲಾ. ಇವನ ದೊಡ್ಡಕೋಟಾನೇ ! ಎಷ್ಟು ಬೇಗ ಬಂದೆವು ರಷ್ಯಾಕ್ಕೆ ! ನೋಡಿದರೆ, " ಏನಿದು, ನಿರ್ಜನ ಸ್ಮಶಾನ ಇದ್ದ ಹಾಗೆ ಇದೆಯಲ್ಲ ? " ಅಂದು ಕೊಂಡು ಕಿಟ್ಟಿಯ ಕಡೆ ನೋಡಿದೆ. " ರಷ್ಯಾ ಅಂದರೆ ಇದು ! ನೋಡು, ಹ್ಯಾಗಿದೆ ವ್ಯವಸ್ಥೆ. ಜನ ಏನಾದರೂ ಕ್ಯೂ ಬಂದು ನಿಂತರೋ---ಕೆಲಸ ಮಾಡೋದಕ್ಕೆ ಮೈಗಳ್ಳತನ ಮಾಡಿಕೊಂಡು ಕ್ಯೂ ನಿಂತು ಕಾಲಾಕಳೀತಿರಾ ಅಂತ ಸ್ಟಾಲಿನ್ ಅವರಿಗೆ ಚಮ್ಡ ಸುಲಿದುಬಿಡ್ತಾನೆ. ಅಂಗಡೀವನೇನಾದರೂ ಬಾಗಿಲು ತೆಗೆದರೆ----ನಮ್ಮ ಕೆಲಸಗಾರರು ಕ್ಯೂ ನಿಂತುಕೊಳ್ಳೋ ಹಾಗೆ ಮಾಡಿ, ಅವರ ಕೆಲಸಕ್ಕೆ ಕಲ್ಲು ಹಾಕಿ, ನಮ್ಮ ಸಂಸ್ಥಾನಕ್ಕೆ ನಷ್ಟಮಾಡ್ತೀಯಾ ಅಂತ ಆ ಅಂಗಡಿಯವನ್ನ ಸ್ಟಾಲಿನ್ ಗಲ್ಲಿಗೆ ಹಾಕಿಸಿಬಿಡ್ತಾನೆ. ಹೀಗಾಗಿ, ಇಲ್ಲಿ ಜನ ಕ್ಯೂನೂ ನಿಲ್ಲೊಲ್ಲ, ಇಲ್ಲಿಯ ಅಂಗಡೀವರು ಬಾಗಿಲೂ ತೆಗೆಯೋಲ್ಲ. ಹೀಗೆ ಈ ದೇಶದಲ್ಲಿ ಕ್ಯೂ ಪದ್ಧತಿ ತುಂಬ ಯಶಸ್ವಿಯಾಗಿ ನಡೀತಾ ಇದೆ " ಅಂತ ಕಿಟ್ಟಿ ಹೇಳಿದ.

ನನಗೆ ಅರ್ಥವಾಗಲಿಲ್ಲ. " ಅದು ಹ್ಯಾಗಯ್ಯಾ ? " ಎಂದೆ. " ಅದು ಹ್ಯಾಗೋ ನನಗೆ ಗೊತ್ತಿಲ್ಲಾಪ್ಪ. ಆ ಭಗವಂತನಿಗೆ ಗೊತ್ತಾಗಬೇಕು. ಅಂದ ಹಾಗೆ, ಅವನಿಗೂ ಗೊತ್ತಾಗೋಹಾಗಿಲ್ಲ. ಯಾಕಂದರೆ, ರಷ್ಯಾದಲ್ಲಿ ಭಗವಂತನ್ನ ಒಳಕ್ಕೆ ಸೇರಿಸೋಲ್ಲ " ಅಂದ ಕಿಟ್ಟಿ.

ಅಷ್ಟರಲ್ಲಿ ನಮ್ಮ ವಿಮಾನದ ಮಾರ್ಗದಲ್ಲಿ ಯಾರೋ ಕ್ಯೂ ನಿಂತಿದ್ದ ಹಾಗೆ ಮಂಸಕುಮಸಕಾಗಿ ಕಾಣಿಸಿತು. " ಕಿಟ್ಟೀ ! ಕಿಟ್ಟೀ ! ಎದುರಿಗೆ ಕ್ಯೂ ! ಎಲ್ಲಾದರೂ ಢಿಕ್ಕಿಹೊಡೆದೀಯಾ ! " ಅಂತ ಕೂಗಿದೆ. ಕಿಟ್ಟೀ ಕೇಕೆಹಾಕಿ ನಗುತ್ತ, ಆ ಕ್ಯೂವನ್ನೇ ಭೇದಿಸಿಕೊಂಡು ನುಗ್ಗಿ, " ಅದು ಯಾವ ಕ್ಯೂ ಗೊತ್ತೇನೋ ? ಮೊನ್ನೆ ಜಪಾನಲ್ಲಿ ಆಟಂಬಾಂಬ್ ಹಾಕಿದಾಗ ಹರೋಹರ ಅಂದ್ರು, ನೋಡು, ಅವರಲ್ಲಿ ನರಕಕ್ಕೆ ಹೋಗೋವ್ರು ಆಚೆ ಹೋಗ್ತಾ ಇದ್ದಾರೆ. ಸ್ವರ್ಗಕ್ಕೆ ಹೋಗೋವ್ರು ಹೀಗೆ ಕ್ಯೂ ನಿಂತುಕೊಂಡು ಕಾಯ್ಕೊಂಡಿದ್ದಾರೆ ಅಷ್ಟೆ. ಇದು ವಿಪಂಚೀಕರಣವಾದ ಪ್ರೇತಗಳ ಪಂಕ್ತಿ--- ನಮ್ಮ ಪಂಡಿತರು ಹೇಳೋಹಾಗೆ ! " ಅಂದ.

ಇಷ್ಟು ಹೊತ್ತಿಗೆ ನನಗೆ---ಮೊದಲೇ ನಿದ್ರೆ ಸಾಲದು ; ಮುಖ ತೊಳೆದಿಲ್ಲ, ಕಾಫಿ ಕುಡಿದಿಲ್ಲ ; ದೊಡ್ಡ ಕೋಟಿದ ಹೊಸ ಅನುಭವ, ತಲೆ ತಿರುಗುತ್ತಿದೆ ; ಎಲ್ಲೆಲ್ಲಿ ಹೋದರೂ ಕ್ಯೂ, ಕ್ಯೂ, ಕ್ಯೂ ; ಇದರ ಜೊತೆಗೆ ಬದುಕಿದವರ ಕ್ಯೂ ಸಾಲದು ಅಂತ ಸತ್ತವರ ಕ್ಯೂ ಬೇರೆ ; ನನಗೆ ಹುಚ್ಚು ಹಿಡಿಯುವುದೊಂದು ಬಾಕಿ---ಹಾಗಾಯಿತು.

ಏತನ್ಮಧ್ಯೆ ನನಗೆ ನನ್ನ ಸ್ವಂತ ಪಂಚೆಯ ಕ್ಯೂ ಜ್ಞಾಪಕ ಬಂದು, ಹುಚ್ಚು ಹಿಡಿದವನ ಹಾಗೆ 'ಕ್ಯೂ---ಕ್ಯೂೂ---ಕ್ಯೂೂೂ' ಅಂತ ಕೂಗಿಕೊಂಡು ಎಡ ಮಗ್ಗುಲಿಗೆ ಹೊರಳಿದೆ.

"ಇದೇನ್ರೀ, ಕೋಳಿ ಕೂಗಿದ ಹಾಗೆ ಕೂಕ್ಕೋತೀರಿ ? ಏಳ್ರೀ. ಎಂಟೂವರೆ ಗಂಟೆ ಆಯ್ತು" ಅಂತ ಮನೇವಳು ಅಂದ ಹಾಗಾಯ್ತು.

ಎದ್ದು ನೋಡಿದರೆ----ಗಂಟೆ ಎಂಟೂವರೆ !

ರಾತ್ರಿ ಕಳ್ಳತನವಾದ ಮನೆಗೆ ಬೆಳಿಗ್ಗೆ ಪೋಲೀಸಿನವರು ತನಿಖೆಗೆ ಬಂದರು. ಒಬ್ಬ ಪೇದೆ ಅಡುಗೆಮನೆ ಗೋಡೇಲಿ ಹಾಕಿದ್ದ ಕನ್ನ ನೋಡಿದ. ಮೂಗಿನ ಮೇಲೆ ಬೆರಳಿಟ್ಟುಕೊಂಡ. "ಖದೀಮರಿರಬೇಕು ಕಳ್ಳರು. ಗೋಡೆಯ ಎರಡೂ ಕಡೆ ಕನ್ನ ಹಾಕಿದ್ದಾರೆ" ಎಂದು ಉದ್ಗಾರ ತೆಗೆದ.

ಅಧ್ವಾನಪುರ

--- ಪ್ರಕಾಶ್

ಎಚ್. ಡುಂಡಿರಾಜ್ ಅವರ ಹೆಸರು ಕೇಳದವರಿಲ್ಲ
ಅವರ ಕವನಗಳೆಂದರೆ ಜೇನು ಸಕ್ಕರೆ ಬೆಲ್ಲ !

ಅವರ ವಿಶಿಷ್ಟ ರೂಪದ ಹನಿಗವನ, ಮಿನಿಗವನಗಳನ್ನು ಓದಿ, ಹಾಸ್ಯ ಹಾಗೂ ಪ್ರಾಸದ ಉಪಯೋಗ (ಹಾಗೂ ದುರುಪಯೋಗ !)ವನ್ನು ಅಪ್ರೀಸಿಯೇಟ್, ತಲೆದೂಗುತ್ತಿರುವವರು ಬೇಕಾದಷ್ಟು ಜನ. ಡುಂಡಿರಾಜರ ಕಿರುನಾಟಕ 'ಅಧ್ವಾನಪುರ' ಅವರ ಹಾಸ್ಯ ಪ್ರಜ್ಞೆಯ ಇನ್ನೊಂದು ಮುಖ. ಪ್ರಸ್ತುತ ರಾಜಕೀಯದ ಅಂಕುಡೊಂಕುಗಳನ್ನು ಅಣಕಾಡಿ, ನಮ್ಮನ್ನು ಉದ್ದಕ್ಕೂ ನಗಿಸಿ ಹಾಗೂ ಅಂತರ್ಮುಖರನ್ನಾಗಿ ಮಾಡುವುದರಲ್ಲಿ ಇದು ಯಶಸ್ವಿಯಾಗಿದೆ. ಈ ಪ್ರಹಸನದಲ್ಲಿ ಹಲವಾರ 'ಕವನ'ಗಳು ಪ್ರಾಸಬದ್ಧವಾಗಿ ಲಾಸ್ಯವಾಡುತ್ತಿವೆ. ಡುಂಡಿರಾಜರ ವಿಶಿಷ್ಟ ಶೈಲಿಯ ಉದಾಹರಣೆಗಳನ್ನು ನೋಡಿ !

ರಾಜ (ರಾಣಿಗೆ) : ನನ್ನ ಪ್ರಶಂಸೆಯ ಪರವಾಗಿ ತಗೋ ಈ ನೆಕ್‌ಲೇಸು.
ರಾಣಿ : ಇದು ನನ್ನ ಕೊರಳಿನಲ್ಲಿರುವುದೇ ಲೇಸು !

O O

ಆಸ್ಥಾನದಲ್ಲಿ ಹೊಗಳುಭಟರ ಪರಾಕು ಕೇಳಿ !

ಭಟ ; ಸ್ವಸ್ತಿ ಶ್ರೀಮನ್ಮಹಾಪರಾಕ್ರಮಿ ! !

O O

ಜನಸಾಮಾನ್ಯರ ಭಜನೆ !

"ನಮ್ಮದೂ ನಿಮ್ಮದೂ ಏನೂ ಇಲ್ಲ
ಎಲ್ಲಾ ಶಿವನದ್ದನ್ನಿರೋ
ಎಲ್ಲಾ ಅವನದ್ದನ್ನಿರೋ
ಪರವಾಗಿಲ್ಲ ಎನ್ನಿರೋ,

(ಭಜನೆ ಮಾಡುವವರ ಮೇಲೆ ಬೆಳಕು ಮಂಕಾಗುತ್ತ ಬಂದು, ಫೋನ್ ಮಾಡುತ್ತಿರುವ ಮಂತ್ರಿಯ ಮೇಲೆ ಕೇಂದ್ರೀಕೃತವಾಗುವುದು) !

ಈ ರೀತಿಯ ಹಾಸ್ಯ ಪ್ರಸಂಗಗಳು ಹಾಸುಹೊಕ್ಕಾಗಿರುವ ಇದು ಹಾಸ್ಯಪ್ರಿಯರೆಲ್ಲರೂ ಓದಲರ್ಹವಾದ ಪ್ರಹಸನ. ಡುಂಡಿರಾಜರ ಲೇಖನಿಗಳಿಂದ ಇನ್ನೂ ಈ ಬಗೆಯ ಪ್ರಕಾರಗಳು ಚಿಮ್ಮಲಿ ಎಂದು ಹಾರೈಸೋಣ.

(ಅಭಿವ್ಯಕ್ತ ಪ್ರಕಾಶನ, ಮಂಗಳೂರು; 1989.)

ಧರ್ಮರಾಯ ಮತ್ತು ಕೆನೆಡಿ

— ಅ. ರಾ. ಸೇ

• ಧೃತರಾಷ್ಟ್ರ ಮಹಾಭಾರತದಲ್ಲಿ ಅತಿಪೇಲವವಾಗಿ ಚಿತ್ರಿತನಾದ ವ್ಯಕ್ತಿಗಳಲ್ಲಿ ಧರ್ಮರಾಯನೂ ಒಬ್ಬನು. ಹಾಗೆಯೇ ನಾನು ಈಚೆಗೆ ಕೇಳಿದ ಒಂದು ಪ್ರವಚನದಲ್ಲಿ ಧರ್ಮರಾಯನು, ಆಧ್ಯಾತ್ಮ ವಿಷಯದಲ್ಲಿ ದ್ರೌಪದಿ ಭೀಮ ಇವರಿಗಿಂತ ಬಹಳ ಹಿಂದುಳಿದವನೆಂದು ಪ್ರಕಾಂಡ ಪಂಡಿತರೊಬ್ಬರು ಹೇಳಿ, ಶ್ರೋತೃಗಳ ಒಂದು ವರ್ಗದಿಂದ ಚಪ್ಪಾಳೆಗಿಟ್ಟಿಸಿದರು. ಅದೇ ರೀತಿಯಾಗಿ ಈಚೆಗೆ ಒಂದು ಲೇಖನಮಾಲೆ ಒಂದರಲ್ಲಿ ಧರ್ಮರಾಯನು ಹಿಂದು ಮುಂದರಿಯದ ಮುಗ್ಧ ಎಂದು ಬರೆದಿದೆ. ಆಧ್ಯಾತ್ಮ ಎಂದರೇನು ? ವ್ಯವಹಾರನಿಪುಣತೆಯೋ ?

ಸರ್ವಜ್ಞನು ಭಾರತವನ್ನು ಕೇಳುವವರು ಅಸ್ಪೃಶ್ಯರು ಎಂದು ಹೇಳಿದ್ದಾನೆ ಎಂದೂ, ದ್ರೌಪದಿಯನ್ನು ಪಣವಾಗಿಟ್ಟ ಧರ್ಮರಾಯ ಮಹಾ ಮೂರ್ಖನೆಂದೂ, ದ್ರೋಣನನ್ನು ಸಂಹರಿಸಲು ಅವನು ಸುಳ್ಳು ಹೇಳಿದನೆಂದೂ ನೂರಾರು ಜನ ಮಾತಾಡಿಕೊಳ್ಳುತ್ತಾರೆ. ಇದೆಲ್ಲವನ್ನು ಕೇಳಿದರೆ ಧರ್ಮರಾಯನು ಅಪ್ರಯೋಜಕನೆನಿಸುತ್ತದೆ.

ಧರ್ಮರಾಯನ ವ್ಯಕ್ತಿತ್ವದಲ್ಲಿರುವ ಪ್ಲಸ್ ಪಾಯಿಂಟುಗಳನ್ನು ಸೂಚಿಸಲು ಈ ಟಿಪ್ಪಣಿ ಬರೆದಿದೆ.

ಧರ್ಮರಾಯ ವೀರನಲ್ಲ ಎನ್ನೋಣ. ಮಹಾವೀರನಾದ ಭೀಮಾರ್ಜುನರು ಸ್ವಂತವಾಗಿ ಯಾರನ್ನು ಕೊಂದರು ? ಧರ್ಮರಾಯ ಶಲ್ಯನನ್ನು ಕೊಂದ. ಭೀಷ್ಮ ದ್ರೋಣರು ಧರ್ಮರಾಯನಿಗಾಗಿ, ಅವನಿಗೆ ವಿಧೇಯರಾಗಿದ್ದ ಪಾಂಡವರಿಗಾಗಿ ಸಾಯಲು ಒಪ್ಪಿದರು. ಅದೂ ಕೃಷ್ಣನ ಯುಕ್ತಿಯಿಂದ ಫಲಿಸಿದ್ದು. ಯಕ್ಷಪ್ರಶ್ನೆಯ ಪ್ರಸಂಗದಲ್ಲಿ ಭೀಮಾರ್ಜುನರ ಪರಾಕ್ರಮ ಏನು ಮಾಡಿತು ? ಭೀಮಾರ್ಜುನರ ಪರಾಕ್ರಮಕ್ಕೆ ಧರ್ಮರಾಯನಿಗೆ ಅವರು ವಿಧೇಯರಾದುದರಿಂದ ಮಾತ್ರ ಬೆಲೆ ಬಂತಲ್ಲವೇ ? ವೃದ್ಧರಿಗೆ, ವಿಧವೆಯರಿಗೆ ಸರ್ಕಾರದಿಂದ ಮಾಸಾಶನ ದೊರೆಯುವಂತೆ ಮಾಡಿದ್ದರಿಂದ, ಧರ್ಮರಾಯನಿಗೆ ಸಮಕಾಲೀನ ಪ್ರಾಶಸ್ತ್ಯ ಇದೆ ಎಂದು ಬರೆಯಲಾಗಿದೆ. ಅದರ ಹಂಚಿಕೆಯಲ್ಲಿಯೂ ಈಗಿದ್ದಂತಹ ವ್ಯವಸ್ಥೆ ಇತ್ತೇ ?

ಭೀಮಾರ್ಜುನರಿದ್ದರೂ, ಧರ್ಮರಾಯ ಏಕೆ ಯುದ್ಧದಲ್ಲಿ ಮತ್ತೆ ಮತ್ತೆ ಪೆಟ್ಟು ತಿಂದ ?

ದ್ರೌಪದಿಯನ್ನು ಪಣವಾಗಿ ಒಡ್ಡಿದ್ದು ತಪ್ಪು, ನಿಜ. ಆಧ್ಯಾತ್ಮದಲ್ಲಿ ಮುಂದು ವರೆದ ಭೀಮ ಆಗಲೇ ಅದನ್ನೇಕೆ ತಡ್ಡೆಯಲಿಲ್ಲ ? ಹಾಗೆ ದ್ರೌಪದಿಯನ್ನು ಪಣವಾಗಿ ಒಡ್ಡಿದುವದಕ್ಕಾಗಿ ಕೃಷ್ಣನೇಕೆ ಧರ್ಮರಾಯನಿಗೆ Ensure ಮಾಡಲಿಲ್ಲ ? ಧರ್ಮರಾಯನ ಸತ್ಯ ಉಳಿಯುವುದಕ್ಕಾಗಿ 13 ವರ್ಷ ಕಾಯಿರಿ ಎಂದೇಕೆ ಕೃಷ್ಣಹೇಳಿದ " ?

ಗದಾಯುದ್ಧಕ್ಕೆ ಮುಂಚೆ 'ನಮ್ಮಲ್ಲಿ ಯಾರಾದ ರೊಬ್ಬ ನನ್ನು ಆರಿಸಿಕೋ' ಎಂದು ಧರ್ಮರಾಯ ಕೌರವನಿಗೆ ಹೇಳಿ, ಕೃಷ್ಣನಿಂದ ಬೈಸಿಕೊಂಡನಷ್ಟೆ, ಆದರೆ ಅವನಿಗೆ ತಾನು ಮಾಡಿದ್ದು ತಪ್ಪು ಎನ್ನಿಸಲಿಲ್ಲ, ಕೃಷ್ಣನೂ ಬಹುಶಃ ಅವನನ್ನು ಪರೀಕ್ಷಿಸಲು ಹಾಗೆ ಹೇಳಿರಬೇಕು. (ಎಷ್ಟೇ ಆಗಲಿ, ಅವನು ವಿನೋದ ಪ್ರಿಯ.)

ನಿರ್ಮಲ ಧರ್ಮಬುದ್ಧಿಯುಳ್ಳವನಾದುದರಿಂದಲೇ, ದೈವ ಅವನಕಡೆಗೆ ಒಲಿಯಿತು. ನಮಗೆ ಈಚಿನ ರಾಜಕೀಯ ಪ್ರೇರಿತ 'ಧರ್ಮ' ಶಬ್ದದಿಂದ ಅರ್ಥವಾಗುವುದೆ ಬೇರೆ. ನಮಗೆ ಅರ್ಥವಾಗುವುದು ಮೀಸಲಾತಿ, ಪ್ರಾತಿನಿಧ್ಯ, ವಿಶೇಷ ಸವಲತ್ತುಗಳೇ ಧರ್ಮದ ಲಾಭ ಎಂದು ಅವು ಸಿಗದಿದ್ದರೂ ತೆಪ್ಪಗಿರುವುದೇ ವಿಶಾಲ ಮನೋಭಾವ.

ಒಂದು ಅನುಮಾನ. ಶಕುನಿ ಭಾರತದ ಕೊನೆಯಲ್ಲಿ, ಪಟ್ಟಾಭಿಷೇಕದ ಸಮಯದಲ್ಲಿ, ಧರ್ಮರಾಯ ಹೇಳುವ ಮಾತನ್ನೇ, ಜಾನ್ ಕೆನೆಡಿ ಈಚೆಗೆ ಹೇಳಿದರು. (ದೇಶಕ್ಕಾಗಿ ನಾವೇನು ಮಾಡಿದ್ದೇವೆ ಎಂದು ಕೇಳಿಕೊಳ್ಳ ಬೇಕು. ದೇಶ ನಮಗೇನು ಮಾಡಿದೆ ಎಂದು ಕೇಳಬಾರದು.) ಇದರಿಂದ ಜಾನ್ ಕೆನೆಡಿ ಮಹಾಭಾರತದಿಂದ ಪ್ರಭಾವಿತರಾದರು ಎಂದು ಸಿದ್ಧವಾಗುತ್ತದೆ. ಅಥವಾ ಸಂಭಾಷಣೆ ಬರೆದವರು ಭಾರತದಲ್ಲಿ ಕೆನೆಡಿಯನ್ನು ಕಾಪಿ ಮಾಡಿರಬೇಕು. ಸಮಕಾಲೀನತೆ ಕೊಡುವ ಭರ ಹೇಗಿದೆ ನೋಡಿರಿ. ಆನಂದಿಸಿರಿ ಮೂರುಹೊಗಿರಿ.

ಧರ್ಮ, ಮೋಕ್ಷಗಳೆಂಬ ಪುರುಷಾರ್ಥಗಳ ಪ್ರತಿಪಾದನೆಗಾಗಿ, ವಾಸುದೇವನನ್ನು ಕೀರ್ತಿಸುವುದಕ್ಕಾಗಿ ಭಾರತವನ್ನು ರಚಿಸಿದರು ಎಂದು ನೆನಪಿಡುವುದು ಗೊಡುಗಳ ಕರ್ಮ ಅಂತ ಕಾಣುತ್ತದೆ.

ಮಿನಿ ಕತೆ

ತರಬೇತಿ

— ನಾ. ಡಿಸೋಜ

ಹೊರಗೆಲ್ಲೂ ಹೋಗದ ಆಕೆ ಗಂಡ ಸತ್ತ ಮೇಲೆ ಹೊಸಿಲು ದಾಟುವುದು ಅನಿವಾರ್ಯವಾಯಿತು. ವಿಶೇಷವಾಗಿ ಕಛೇರಿ ಇತ್ಯಾದಿಗಳನ್ನು ದೂರದಿಂದ ನೋಡಿದವಳು ಈಗ ಅವುಗಳ ಕಟ್ಟೆ ಹತ್ತಿ ಬರಬೇಕಾಯಿತು. ಅವಳ ಗಂಡ ತೀರಿಕೊಂಡ ಅನಂತರ ಮೊದಲ ಬಾರಿಗೆ ಅವಳು ನಮ್ಮ ಕಛೇರಿಗೆ ಬಂದಾಗ ಮೈ ತುಂಬ ಸೆರಗು ಹೊದ್ದು ಹತ್ತು ನಿಮಿಷ ಬಾಗಿಲ ಹೊರಗೇನೆ ನಿಂತಿದ್ದಳು.

ಒಳಗೆ ಕರೆದು ಅವಳ ಗಂಡ ಸತ್ತದ್ದರಿಂದ ಅವಳಿಗೆ ಕೊಡಬೇಕಾದ ಸುಮಾರು 40,000 ರೂ.ಗಳನ್ನು ಅವಳ ಎದುರು ಇರಿಸಿದಾಗ ಅವಳು ಕಕ್ಕಾಬಿಕ್ಕಿಯಾದಳು.

“ಎಣಿಸಿಕೊಳ್ಳಮ್ಮ...ಬ್ಯಾಂಕಿನಲ್ಲಿ ಅಕೌಂಟ್ ತೆರೆದು ಜೋಪಾನವಾಗಿಡು...”

ಎಂದೆಲ್ಲ ಹಿತವಚನ ಹೇಳುತ್ತಿರಲು ಅವಳು ಕೈಲಿದ್ದ ಚರ್ಮದ ಚೀಲದ ಜಿಪ್ ತೆಗೆಯಲು ಬರದೆ ಪರದಾಡುತ್ತಿದ್ದಳು. ಕೊನೆಗೆ ನಾನೇ ಜಿಪ್ ತೆಗೆದು ನೋಟಿನ ಕಂತೆಗಳನ್ನು ಒಂದೊಂದಾಗಿ ಎಣಿಸಿ ಚೀಲದಲ್ಲಿರಿಸಿದಾಗ ಅವಳು ಕೃತಜ್ಞತೆ ವ್ಯಕ್ತಪಡಿಸಿದಳು.

ಹಣ ಬಂದುದಕ್ಕೆ ಸಹಿ ಮಾಡಿ ಕೈ ಮುಗಿದು ಆಕೆ ಹೋದಾಗ ಜವಾನ, “ಪಾಪ ಏನೂ ಗೊತ್ತಿಲ್ಲ ಸಾರ್” ಎಂದ.

“ಹ್ಯಾಗೆ ಗೊತ್ತಿರುತ್ತಯ್ಯ? ಸಂಬಳ ತೊಕೊಂಡು ಹೋಗೋದು ಗಂಡಿನ ಕೆಲಸ....ಹೆಂಗಸರಿಗೆ ಇವೆಲ್ಲ ತಿಳಿಯೋದಿಲ್ಲ ಬಿಡು....” ಎಂದೆ.

ಅನಂತರ ಆಕೆ ಮತ್ತೂ ಒಂದೆರಡು ಸಾರಿ ಬಂದಳು, ಅವಳಿಗೆ ದೊರೆಯು ಬೇಕಿದ್ದ ಹಣಕ್ಕಾಗಿ, ಸ್ಟ್ಯಾಂಪಿನ ಮೇಲೆ ರುಜು ಹಾಕಿ ಹಣ ಎಣಿಸಿಕೊಟ್ಟ ಅನಂತರ, ಅಷ್ಟನ್ನೂ ಬ್ಯಾಗಿಗೆ ತುರುಕಿಕೊಂಡು ಮೌನದಿಂದ ಹೋದಳು.

ನಾಲ್ಕನೆಯ ಬಾರಿ ಬಂದಳು ತಾಲೂಕು ಆಫೀಸಿನಲ್ಲಿ ಯಾವುದೋ ದೃಢೀಕರಣ ನೀಡಲು ಸತಾಯಿಸುತ್ತಿದ್ದಾರೆ ಎಂದು ಹೇಳಲು.

ನಿವೃತ್ತಿ ವೇತನ ಕೊಡಲು ಕಿರುಕುಳ ನೀಡುತ್ತಿದ್ದಾರೆ ಟ್ರೆಜರಿಯವರು ಎಂದು ಬಂದಳು.

ಪುರಸಭೆಯವರಿಂದ ಕಾಟ ಎಂದು ಬಂದಳು.

ಈ ಒಂಟಿ ಹೆಣ್ಣಿಗೆ ಕೆಲವೆಡೆ ಕೆಲ ಅನುಕೂಲಗಳೋ, ಕೆಲಸವೋ ಆಗಬೇಕಿತ್ತು. ಅಲ್ಲಲ್ಲಿ ಕಿರುಕುಳ ಆದಾಗ ಸಹಜವಾಗಿ ನನ್ನ ನೆನಪಾಗಿಯೋ, ಇಲ್ಲ, ತನ್ನ ಗಂಡ ಕೆಲಸ ಮಾಡುತ್ತಿದ್ದ ಕಛೇರಿಯವರಿಂದ ತನಗೆ ಸಹಾಯವಾಗುತ್ತದೆಂದೋ ನಂಬಿ ಆಕೆ ಬರುತ್ತಿದ್ದಿರಬಹುದು. ಆಗ ನಾನು ಸಂಬಂಧಪಟ್ಟವರಿಗೆ ಫೋನ್ ಮಾಡಿ ಅವಳ ಕೆಲಸ ಮಾಡಿಸುತ್ತಿದ್ದೆ.

ಅವಳ ಗಂಡ ಸತ್ತ ಅನಂತರದ ಎರಡು ಮೂರು ತಿಂಗಳು ಅವಳು ಬರುತ್ತಿದ್ದು; ಅನಂತರ ಬರುವುದನ್ನು ನಿಲ್ಲಿಸಿದಳು. ನಾನೂ ಮರೆತೆ.

ಆರು ತಿಂಗಳ ಅನಂತರ ಸರಕಾರ ತುಟ್ಟಿ ಭತ್ಯವನ್ನು ಹಿಂದಿನ ಯಾವುದೋ ಅವಧಿಗೆ ಹೆಚ್ಚಿಸಿತು. ಎಲ್ಲ ನೌಕರರ ಬಾಕಿ ಬಿಲ್ ಮಾಡಿದಾಗ ಈ ಹೆಂಗಸಿನ ಗಂಡನಿಗೂ ಹಳೆ ಬಾಕಿ 200 ರೂ. ಬಂದಿತು. ಜವಾನನಿಗೆ ಹೇಳಿ, ಆ ಹೆಂಗಸಿಗೆ ವಿಷಯ ತಿಳಿಸು ಎಂದೆ.

ಅಪರಾಹ್ನ ನಾಲ್ಕು ಹೊಡೆದಾಗ ಅವಳು ಬಂದಳು. ಕೊಂಚ ದಿಟ್ಟತನ, ಧೈರ್ಯ ಬಂದಂತಿತ್ತು. ಬೆರಳು ತೋರಿಸಿದ ಕಡೆ ಸಟಸಟನೆ ಸಹಿ ಮಾಡಿದಳು. 20 ರ ಹತ್ತು ನೋಟುಗಳನ್ನು ಅವಳ ಮುಂದಿಟ್ಟು, "ತೊಕೋಳಮ್ಮ ತುಟ್ಟಿ ಭತ್ಯದ ಬಾಕಿ......ಮೂರು ತಿಂಗಳಿಂದು" ಎಂದೆ.

ಆಕೆ ನೋಟುಗಳನ್ನು ಎಣಿಸಿಕೊಂಡು, 20ರ ಒಂದು ನೋಟನ್ನು ನನ್ನ ಮುಂದಿರಿಸಿ, ಬಾಗಿಲತ್ತ ತಿರುಗಿದಾಗ ನಾನು ಕಕ್ಕಾವಿಕ್ಕಿಯಾದೆ.

ಬಿಸಿಲು ಮಳೆ ಬೀಳ್ತಿತ್ತು, ಅವರು ಮದುವೆಯಾದಾಗ. ಅದಕ್ಕೇ ನೋಡಿ ನಾಯಿ ನರೀ ತರಹ ಸಂಸಾರ ಮಾಡ್ತಾ ಇದ್ದಾರೆ.

ಪುರುಷಸ್ಯ ಭಾಗ್ಯಂ

ನಕ್ಕಾಂವಾ ಗೆದ್ದಾಂವಾ —ಶೀನೂ

ಸುಮಾರು 40–45 ವರ್ಷಗಳ ಅನಂತರ ಮೊನ್ನೆ ಅಶೋಕ ಕುಮಾರ ನಟಿಸಿದ ಹಳೇ ಚಿತ್ರಪಟ "ಕಿಸ್ಮತ್" ಬಂದಿತ್ತು, "ಪ್ರಕಾಶ್" ಥೇಟರ್‌ನಲ್ಲಿ. ಅಂದಿನ ಕಾಲಕ್ಕೆ ಈ ಚಿತ್ರ ಕಲಕತ್ತೆಯಲ್ಲಿ ಮೂರು ವರ್ಷಗಳವರೆಗೆ, ಮುಂಬಯಿಯಲ್ಲಿ ಎರಡು ವರ್ಷಗಳವರೆಗೆ ಸತತವಾಗಿ ಪ್ರದರ್ಶಿತಗೊಂಡು ವಿಕ್ರಮ ಸಾಧಿಸಿತ್ತು.

ಈ ಚಿತ್ರದ ಜತೆಜತೆಗೇ ನನ್ನ ಜೀವನದ ಮೊದಲ ಘಟ್ಟದ ಎಷ್ಟೆಷ್ಟೋ ಸ್ಮೃತಿಗಳು ನೇಯ್ದುಕೊಂಡಿವೆ. ಹಾಗೆ ನೋಡಿದರೆ ಈ ಚಿತ್ರ ನನ್ನ ಬಾಳಿನಲ್ಲಿನ ಒಂದು ಬಲು ಮಹತ್ವದ ತಿರುವಿಗೇ ಕಾರಣವಾಗಿದೆ ಎನ್ನಬಹುದು.

ಅಂದು 1946-47ರ ಕಾಲ. ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದೆ. ಓದುತ್ತಿದ್ದೆ ಎನ್ನುವದಕ್ಕಿಂತ ಬರಿದೇ ಹೈಸ್ಕೂಲ್‌ಗೆ ಹೋಗುತ್ತಿದ್ದೆ ಎನ್ನುವದೇ ಸರಿಹೋದೀತು. ಪ್ರತಿ ಎರಡು ವರ್ಷಗಳಿಗೊಮ್ಮೆ ಎಡವುತ್ತ, ಕುಂಟುತ್ತ "ಮೆಟ್ರಿಕ್" ವರೆಗೆ ಬಂದಿದ್ದೆ. ನನ್ನ ಸಹವಾಸವೂ ಅಂಥಹದೇ ಇತ್ತು. ಶಾಲೆಯ ಓದಿಗಿಂತ ಹೆಚ್ಚಾಗಿ ಹೋಟೆಲ್ ತಿಂಡಿ, ಹನಿಡ್ಯೂ ಸಿಗರೇಟು, ಹೊಸ ಹೊಸ ಸಿನೆಮಾಗಳನ್ನು ಬಿಡದೇ ನೋಡುವದು ಇದರಲ್ಲಿಯೇ ನಮ್ಮೆಲ್ಲರ ಹೊತ್ತು ಕಳೆಯುತ್ತಿತ್ತು.

ಅದೇ ತಾನೇ 'ಮೆಟ್ರಿಕ್, ವರ್ಗ ಪ್ರಾರಂಭವಾಗಿದ್ದವು. ಪರೀಕ್ಷೆಗೆ ಇನ್ನೂ ಸುಮಾರು ವರ್ಷವೆಲ್ಲ ಬಾಕಿ ಇತ್ತು. ಅಂತಹದರಲ್ಲಿ ಊರಿನ ವಿಜಯಲಕ್ಷ್ಮಿ ಥೇಟರಿನಲ್ಲಿ ಇದೇ ಚಿತ್ರಪಟ "ಕಿಸ್ಮತ್" ಬಂದಿತ್ತು. ಕೇಳಬೇಕೆ ? ಶಾಲೆಗೆ ಚಕ್ಕರ್ ಹೊಡೆದು ನಾಲ್ಕೈದು ಸಲ ಚಿತ್ರ ನೋಡಿದ್ದಾಗಿತ್ತು.

ತಲೆಗೊಂದು ಪಠಾಣಿ ಪೇಟ ಸುತ್ತಿ, ಒಳ್ಳೆ ಠೀವಿಯಿಂದ, ಶೋಕಿಯಲ್ಲಿ ಸಿಗರೇಟು ಎಳೆಯುತ್ತ ಕುಲುಕುಲು ನಗುವ ಅಷ್ಟುಪೈಲು ಮುಖದ ಅಶೋಕ ಕುಮಾರನ ಅಭಿನಯ, ಮುಗ್ಧತೆಯೇ ಮೈತಳೆದು ಬಂದಂತೆ ತೋರುವ ಕರುಣಾರ್ದ್ರ ಮುಖದ ಚಲುವೆ ಕಥಾನಾಯಕಿ, ಕಳ್ಳನೊಬ್ಬನ ಬಾಳಿನ ಸುತ್ತ ಹೆಣೆದುಕೊಂಡು ಪದರು ಪದರಾಗಿ ಬಿಚ್ಚಿಕೊಳ್ಳುವ ಕಥೆ, ಮನ ಸೂರೆಗೊಳ್ಳುವ ಸಂಗೀತ, ಹರೆಯಕ್ಕೆ ಹುಚ್ಚು ಹಿಡಿಸಲು ಇಷ್ಟು ಸಾಲದೇ ? ಚಿತ್ರವನ್ನು ಮಾತ್ತೆ ಮತ್ತೆ, ಇನ್ನೊಮ್ಮೆ, ಮೊತ್ತೊಮ್ಮೆ ನೋಡುವ ಆಸೆ. ಆಗಲೇ ಮೂರುಸಲ ತಂದೆಯ ಜೇಬಿನಿಂದ ಹಣ ಕತ್ತರಿಸಿಯಾಗಿತ್ತು.

ಮಹಾತ್ಮಾ ಗಾಂಧಿ ಕೂಡ ಬಾಲ್ಯದಲ್ಲಿ ಹಣ ಕದ್ದಿದ್ದರಲ್ಲವೇ ? ಮಹಾತ್ಮಾ ಗಾಂಧಿಯದೇನು ಮಹಾ ? ಸಾಕ್ಷಾತ್ ಅಶೋಕ ಕುಮಾರನೇ ಚಿತ್ರದಲ್ಲಿ ಜೇಬುಗಳ್ಳನಾಗಿರುತ್ತಾನಲ್ಲವೇ ?

ನಾಲ್ಕನೆಯ ಸಲ ತಂದೆಯ ಜೇಬಿಗೆ ಕೈ ಹಾಕಿದಾಗ ಸಿಕ್ಕಿಬಿದ್ದಿದ್ದೆ. ಮೂಳೆ ಮುರಿಯುವಂತೆ ಪೆಟ್ಟು ತಿಂದಿದ್ದೆ. ಸಾಲದೆಂಬಂತೆ ಮನೆಯಲ್ಲಿ ಮೂರು ದಿನಗಳವರೆಗೆ ರಾದ್ಧಾಂತವೋ ರಾದ್ಧಾಂತ— ಅಪ್ಪನ ಸಿಟ್ಟು— ಅಕ್ಕಸತನ— ಒದರಾಟ— ತಾಯಿಯ ಅಳು— ತಂಗಿಯರ ಚೀರಾಟ— ಮನೆತನದ ಕಷ್ಟಕಾರ್ಪಣ್ಯಗಳ ಬಗ್ಗೆ ಮತ್ತೆ ಮತ್ತೆ ತಿಳಿಹೇಳುವುದು— ಇನ್ನೇನು ನಿವೃತ್ತರಾಗಲಿರುವ ತಂದೆಯ ಆರ್ಥಿಕ ಮುಗ್ಗಟ್ಟು—ನನ್ನ ಭವಿಷ್ಯ— ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ— ಬೆಳೆಯುತ್ತಿರುವ ಬೆಲೆಯೇರಿಕೆ— — ಇಬ್ಬರು ತಂಗಿಯರ ಮದುವೆ— ನನ್ನ ಮೆಟ್ರಿಕ್ ಪರೀಕ್ಷೆಯನ್ನೇ ಬಾಯಿಬಿಟ್ಟು ನೋಡುತ್ತಿರುವ ಇಡೀ ಕುಟುಂಬ—; ಒಂದೇ, ಎರಡೇ. ಅಂತೂ ಆ ಘಟನೆಯಿಂದಾಗಿ ನನ್ನ ಜೀವನಗತಿಯೇ ಬದಲಾಯಿತೆನ್ನಬೇಕು.

ಒಂದೇ ರಾತ್ರಿಯಲ್ಲಿ ನಾನು ಬೇರೊಬ್ಬ ಮನುಷ್ಯನಾಗಿ ಮಾರ್ಪಟ್ಟಿದ್ದೆ. ಅಂದಿನಿಂದ ನನ್ನ ಜೀವನಕ್ರಮವೇ ಬದಲಾಯಿತು. ದಿನದ ಮೂರು ಹೊತ್ತು ಶಾಲೆ, ಓದು, ಅಭ್ಯಾಸ, ಅಲ್ಜೀಬ್ರ, ಜಾಮಿಟ್ರಿಗಳದೇ ಚಿಂತೆ. ಊರ ಮುಂದಲ ಆಂಜನೇಯನಿಗೆ ದಿನಂಪ್ರತಿ ಪ್ರದಕ್ಷಿಣೆ,— ಸಮಯ ಉಳಿದರೆ ತಾಯಿಗೆ ನೆರವಾಗುವದು, ತಂಗಿಯರಿಬ್ಬರ ಪಾಠ ನೋಡುವದು; ಒಟ್ಟಿನಲ್ಲಿ ನಿನ್ನೆಯ ಹುಡುಗತನವನ್ನು ಕಳಚಿ ಎಸೆದು, ನಾಳೆಯ ಅಮೂರ್ತವನ್ನೆದುರಿಸುವ ಸಿದ್ಧತೆಗೆ ತೊಡಗಿದ್ದೆ.

ಕೊನೆಗೂ ಆ ವರುಷ "ಮೆಟ್ರಿಕ್" ಪರೀಕ್ಷೆ 'ಪ್ಯಾಸು', ಮಾಡಿದೆ. ಮುಂದೆ ಮೂರು ತಿಂಗಳಲ್ಲಿ 'ಟ್ಯಾಪಿಂಗ ಕೋರ್ಸ' ಮುಗಿಸಿ ಅವರಿವರ ಕಾಲು ಹಿಡಿದು ರೆವ್ಹಿನ್ಯೂದಲ್ಲಿ ಒಂದು ಟ್ಯಾಪಿಸ್ಟ ಕೆಲಸ ದೊರಕಿಸಿ ಮನೆತನದ ನೊಗಕ್ಕೆ ಗೋಣು ತೂರಿದ್ದೆ. ಆದರೇನು? ಸಂಸಾರ ಪೀಡೆಯಲ್ಲಿ ಯಾವಾಗಲೂ ತೊಳಲುತ್ತ, ಬಳಲುತ್ತ, ನನ್ನ ಭವಿಷ್ಯತ್ತಿನ ಬಗ್ಗೆ ಚಿಂತಿಸಿ ಕೊರಗಿ ಹಣ್ಣಾದ ತಂದೆಯವರು ಮಾತ್ರ ಮೆಟ್ರಿಕ್ ಪರೀಕ್ಷೆಯ ಪರಿಣಾಮ ಇನ್ನೆಂಟು ದಿನಗಳಿರುವಾಗ, ಯಾವದೋ ಹೆಸರಿಲ್ಲದ ಬೇನೆಯಲ್ಲಿ ನಾಲ್ಕು ದಿನ ನರಳಿ ತೀರಿ ಹೋಗಿದ್ದರು.

ಮುಂದಿನ 30 ವರ್ಷಗಳಲ್ಲಿ ಟ್ಯಾಪಿಸ್ಟನಿಂದ ಹಂಗಾಮಿ ಗುಮಾಸ್ತೆ, ಗುಮಾಸ್ತೆಯಿಂದ ಸೆಕೆಂಡ ಡಿವ್ಹಿಜನ್ ಕ್ಲರ್ಕ, ಅಲ್ಲಿಂದ ಫಸ್ಟ ಡಿವ್ಹಿಜನ್ ಕ್ಲರ್ಕ ಇತ್ಯಾದಿ ಘನೆಂದಾರಿ ಹುದ್ದೆಗಳಿಗೇರಿ, ಪಿಂಚಣಿಗೆ ಒಂದು ವರುಷವಿದ್ದಾಗ ಪಿ. ಎ. ಟು ಸಬ್‌ರಿಷ್ಟ ಪದವಿಯ ವರೆಗೆ ಏರಿದ್ದೆ. ಸಂಬಳ, ಮೇಲೆ ಸ್ವಲ್ಪ ಅದೂ ಇದೂ 'ಸೇರಿಸಿ ಈಗ ಇರುವ ಮನೆ

ಕೊಂಡಾಗಿತ್ತು. ಹಿರಿಯ ಮಗಳ ಮದುವೆಯನ್ನು ಮುಗಿಸಿದ್ದೆ ಈಗ ಕೊನೆಯ ಮಗ ಮೆಟ್ರಿಕ್‌ನಲ್ಲಿ ಅಂದರೆ ಈಗಿನ ಎಸ್.ಎಸ್.ಸಿ. ಲಿದ್ದಾನೆ.

ಈಗ ಮತ್ತೆ "ಕಿಸ್ಮತ್" ಚಿತ್ರ ಬಂದಿತ್ತು, ಅಶೋಕ ಕುಮಾರನದು. ಹೋಗಿದ್ದೆ. ಯಥಾ ಪ್ರಕಾರ ಹಳೆಯ ಚಿತ್ರವೆಂದೊಡನೆ ಥೇಟರಿನ ತುಂಬೆಲ್ಲ ತರುಕರೇ ತುರುಕರು. ಸಭಾಗೃಹವೆಲ್ಲ ಬುರ್ಖಾ ಧಾರಿಣಿಯರ ಕಲರವದಿಂದ ತುಂಬಿತ್ತು. ಅತ್ತರು, ಬೀಡಿ, ಚಾರ್‌ಮಿನಾರ್ ಸಿಗರೇಟು ಪಾನ ಬೀಡಗಳ ಸಮ್ಮಿಶ್ರ ಉಗ್ರ ವಾಸನೆ ಮೂಗಿಗೆ ಅಡರುತ್ತಿತ್ತು.

ಆದರೆ ಇವೆಲ್ಲವುಗಳ ಮಧ್ಯೆಯೇ ನನ್ನ ಆರಾಧ್ಯ ದೈವವಾದ ಅಶೋಕ ಕುಮಾರನ "ಕಿಸ್ಮತ್" ಚಿತ್ರ ನಡೆದಿತ್ತು.

ಅಂದು 40 ವರ್ಷಗಳ ಹಿಂದೆ "ಕಿಸ್ಮತ್" ಚಿತ್ರ ನಮ್ಮ ಊರಿಗೆ ಬಂದಿರದಿದ್ದರೆ, ನಾನು ನಾಲ್ಕನೆಯ ಸಲ ತಂದೆಯ ಜೇಬಿಗೆ ಕತ್ತರಿ ಇಟ್ಟಿರದಿದ್ದರೆ, ತಂದೆ ನನ್ನನ್ನು ಸಿಕ್ಕಾ ಪಟ್ಟೆ ಥಳಿಸದೇ ಇದ್ದಿದ್ದರೆ, ಅವರು ಆ ರೀತಿ ಥಳಿಸದೇ ಹೋಗಿ ನನಗೆ ನಮ್ಮ ಮನೆ ತನದ ದಾರುಣ ಸ್ಥಿತಿ ತಿಳಿಯದೇ ಹೋಗಿದ್ದರೆ, ನಾನು ಮೆಟ್ರಿಕ್ ದಾಟದೇ ಉಳಿದು ಬಿಟ್ಟಿದ್ದರೆ—— ಅಂತೂ ಈ "ರೇ ರಾಜ್ಯ" ಗಳ ಭಯಾವಹ ಬವಣೆಯಿಂದ ನನ್ನನ್ನು ತಪ್ಪಿಸಲು ದೇವದೂತನಂತೆ ಬಂದ ಅಶೋಕ ಕುಮಾರ ನನ್ನ ಆರಾಧ್ಯ ದೈವವಲ್ಲದಿದ್ದರೆ ಇನ್ನೇನು ?

ಚಿತ್ರ ನಡೆದಿತ್ತು. ಚೋರ ಶಿಖಾಮಣಿ ಅಶೋಕ ನಾಯಕಿಯ ಮನೆಗೆ ಬಂದಿರು ತ್ತಾನೆ. ಅವಳು ಅಂದಿನ ಬೆಳದಿಂಗಳ ರಾತ್ರಿಯಲ್ಲಿ ಬಾಲ್ಕನಿಯ ಕುರ್ಚಿಯಲ್ಲಿ ಕುಳಿತು ತೆಯೇ ನಿದ್ದೆ ಹೋಗಿದ್ದಾಳೆ. ಅಶೋಕ ಕುಮಾರ ಕಳ್ಳ ದನಿಯಲ್ಲಿ

ಧೀರೇ ಧೀರೇ ಆರೇss, ಆರೇ ಬಾದಲವಾss,——" ಎಂದು ಹಾಡುತ್ತ, ಅವಳ ಸುತ್ತ ಪ್ರದಕ್ಷಿಣೆ ತೆಗೆಯುತ್ತಿದ್ದಾನೆ ಆ ಚಿರಪರಿಚಿತ ಹಾಡಿಗೂ, ಆ ಚಿತ್ರದ ಬೆಳದಿಂ ಗಳಿನ ಮೋಡಿಗೂ, ನನ್ನ ಸ್ಮೃತಿಗರ್ಭದ ಆಳದಲ್ಲಿ ಹುದುಗಿದ್ದ ಎಷ್ಟೆಷ್ಟೋ ನೆನಪುಗಳು ವಾಸನೆಯ ಜಾಡಿಗೆ, ಸುಸ್ಪಷ್ಟ ಮೂರ್ತ ರೂಪ ತಾಳಿ, ಮೊದಲಿಗೆ ಒಂದೊಂದರಂತೆ, ಆ ಮೇಲೆ ಒಟ್ಟೊಟ್ಟಾಗಿ ಮೇಲೆ ನುಗ್ಗಿ, ಬುದ್‌ಬುದಗೊಳ್ಳತೊಡಗಿದವು. ಹತೋಟಿತಪ್ಪಿದ ನನ್ನ ಹಪಾಪಿ ಆತ್ಮ 40 ವರುಷಗಳ ಹಿಂದಿನ ಶಾಲೆಯ ದಿನಗಳಲ್ಲಿ, ಅಂದಿನ ಊರಿನ ಬೀದಿ ಬೀದಿಗಳಲ್ಲಿ ಓಣಿ ಸಂದಿಗಳಲ್ಲಿ ದಿಕ್ಕೆಟ್ಟು ಅಲೆಯತೊಡಗಿತು ಅಂದಿನ ಮಳೆಯನ್ನೂ ಬಿಸಿಲನ್ನೂ ಅನುಭವಿಸತೊಡಗಿತು. ಆದರೆ ಈ ಸ್ಮೃತಿಗಳ ನಡುವೆಯೇ ತಂದೆಯ ನೆನಪು ಮತ್ತೆ ಮತ್ತೆ ಪುಟಿದೆದ್ದು ಬರುತ್ತಿತ್ತು. ಪಾಪ, ಅವರು ಕೊನೆಗೂ ಕೊರಗಿ ಕೊರಗಿಯೇ

ಸತ್ತರು. ಬಡತನದಲ್ಲಿ ಬಳಲಿ ಕಷ್ಟ ಕಾರ್ಪಣ್ಯದಲ್ಲಿ ನರಳಿಯೇ ತೀರಿ ಹೋದರು. ನಾನು, ಅವರ ಒಬ್ಬನೇ ಪುತ್ರ, ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದದ್ದನ್ನೂ, ಮುಂದೆ ನಾನೂ ಒಬ್ಬ ಮನುಷ್ಯನಾಗಿ ಹೊಟ್ಟೆ ಬಟ್ಟೆಗೆ ಕೊರತೆಯಿಲ್ಲದೆ ಬದುಕಿದ್ದನ್ನೂ ಅವರು ನೋಡಲೇ ಇಲ್ಲ. ಪಾಪ! ನನ್ನ ಕಣ್ಣು ಒದ್ದೆಯಾದವು, ಮತ್ತೆ ಮತ್ತೆ ಹನಿಗೂಡತೊಡಗಿದವು. ಕೊನೆಗೆ ಒಮ್ಮೆಲೇ ತಾಳಲಾರದ ದುಃಖ ಉಕ್ಕಿ ಬಂದು, ಕರವಸ್ತ್ರದಲ್ಲಿ ಮುಖ ಮುಚ್ಚಿಕೊಂಡು ಬಿಕ್ಕುತ್ತ ಬಿಕ್ಕುತ್ತಲೇ ಚಿತ್ರವನ್ನು ಮಧ್ಯಕ್ಕೇ ಬಿಟ್ಟು, ಕತ್ತಲಲ್ಲಿಯೇ ದಾರಿ ಮಾಡಿಕೊಂಡು ಹೊರಗೆ ಬಂದೆ.

ಬಾಲ್ಕನಿಯಲ್ಲಿ ಬಂದು ದೂರದ ಒಂದು ಮೂಲೆಯಲ್ಲಿ ಕಂಬಕ್ಕೆ ಒರಗಿ ಹೃದಯ ಹಗುರಾಗುವವರೆಗೆ ಅತ್ತು ಬಿಟ್ಟೆ. ಮನಸ್ಸು ಹಗುರಾದ ಮೇಲೆ ಇನ್ನೇನು ಉಳಿದ ಚಿತ್ರ ನೋಡಲು ಮತ್ತೆ ಥೇಟರಿನ ಒಳಗೆ ಹೋಗಬೇಕೆನ್ನುವಾಗ, ಕಂಬದ ಆಚೆ ಬದಿಗೆ ಇನ್ನಾರೋ ಮುಖ ತಗ್ಗಿಸಿ ಕರವಸ್ತ್ರವನ್ನು ಕಣ್ಣುಗಳಿಗೊತ್ತಿಕೊಂಡು, ದುಃಖಿಸಿ, ದುಃಖಿಸಿ ಅಳುತ್ತಿರುವದು ಕಂಡಿತು.

ನಾನು ತುಸು ಕಂಬದ ಬದಿಗೆ ಸರಿದು ನೋಡಿದೆ. ಒಬ್ಬ ಮುಸ್ಲಿಂ ಸದ್ಗೃಹಸ್ಥ, ಸುಮಾರು 50ರ ಪ್ರಾಯ. ಶುಭ್ರ ಬಿಳಿಯ ಪರಾಯಿ ತೊಟ್ಟು, ಮೇಲೆ ಅಷ್ಟೇ ಶುಭ್ರ ಲಾಂಗ್ ಕೋಟ್ ಧರಿಸಿದ್ದ ಆಢ್ಯ ವ್ಯಕ್ತಿತ್ವ. ಅಂತಹ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರುಗು ಕೊಡುವ ಬಿಳಿ ಗಡ್ಡ, ನೀಳ ನಾಸಿಕ, ನರೆಗೂದಲು, ಇಂಪೋರ್ಟೆಡ್ ಸೆಂಟಿನ ಮಧುರ ವಾಸನೆ. ಒಟ್ಟಿನಲ್ಲಿ ಒಬ್ಬ ಪ್ರಭಾವೀ ನವಾಬೀ ಮನುಷ್ಯ.

ನಾನು ಕುತೂಹಲ ತಾಳಲಾರದೇ ಆ ವ್ಯಕ್ತಿಯ ಬಳಿ ಸಾರಿ "ಸಾಹೇಬರೇ" ಎಂದೆ. ನವಾಬರು ನನ್ನೆಡೆಗೆ ಹೊರಳಿದರು. ಒಮ್ಮೆಲೆ ದುಃಖದ ಕಟ್ಟೆಯೊಡೆದಂತೆ ಭೋರಾಡಿ ಅಳಲಾರಂಭಿಸಿದರು. ನನಗೇ ತಿಳಿಯದ ಯಾವದೋ ಒಂದು ಸಮಾನ ದುಃಖದ ಭಾವದಲ್ಲಿ ನಾನು ಅವರ ಬೆನ್ನ ಮೇಲೆ ಕೈ ಯಾಡಿಸುತ್ತ ಅವರನ್ನು ಸಾಂತ್ವನಗೊಳಿಸಲೆತ್ನಿಸುತ್ತಿದ್ದೆ.

ಅಳುವಿನ ಆವೇಗ ಇಳಿದ ಮೇಲೆ ಸಾಹೇಬರು ಮಾತನಾಡಲುಪಕ್ರಮಿಸಿದರು.

"ನಮ್ಮ ಅಬ್ಬಾಜಾನ, ಸ್ವಾಮಿ ಅಂದರೆ ನಮ್ಮ ಫಾದರ್ರು ಒಂದೇ ಸಮನೆ ನಾ ಮೆಟ್ರಿಕ್ ಆಗಲಿಲ್ಲ ಮೆಟ್ರಿಕ್ ಆಗಲಿಲ್ಲ ಅಂತ ಎದೀ ಬಡಕೊಂಡು ಸತ್ತಹೋದರ್ರೀ.... ಇಷ್ಟು ಹೇಳುವ ಹೊತ್ತಿಗೆ ಸಾಹೇಬರಿಗೆ ಇನ್ನೊಮ್ಮೆ ಅಳು ಒತ್ತರಿಸಿ ಬಂತು. ಕೊಂಚ ಸಾವರಿಸಿಕೊಂಡು ನವಾಬರು ಮತ್ತೆ ಹೇಳತೊಡಗಿದರು"........ತೀಸ, ಚಾಲೀಸ ವರ್ಷಕ್ಕಿಂತ ಹಿಂದ ಮಾತರಿ. ನಾವೆಲ್ಲ ಬಹಾಳ ಅಂದರ ಬಹೂತೀಚ ಗರೀಬ ಇದ್ದಿವಿರಿ.

ಮನೀ ಒಳಗ ಔರತ ಲೋಕಾ ಮರ್ದ ಲೋಕಾ ಎಲ್ಲಾ ಕೂಡಿ ಹದಿನಾಲ್ಕು ಮಂದಿ ಇದ್ದಿವಿರಿ. ನಮ್ಮ ಅಪ್ಪ ಯಾವದೋ ಒಂದು ಫ್ಯಾಕ್ಟರಿ ಒಳಗ ವಾಚ್‌ಮನ್ ಇದ್ದನರಿ, ಪಾಪ ರಾತ್ರಿ ಡ್ಯೂಟಿ ಮುಗಿಸಿಬಂದು ಹಗಲೆಲ್ಲ ಜಟಕಾ ಓಡಸತಿದ್ದ. ಇಬ್ಬರು ಅಣ್ಣಂದಿರು ಛಾಪಖಾನಾದಾಗ ಬುಕ್ ಬೈಂಡಿಂಗ ಮಾಡತಿದ್ದರ್ರಿ. ಅಮ್ಮಾ ಬೇಚಾರೀ........" ತಾಯಿಯ ಮಾತು ಬಂದೊಡನೆ ಸಾಹೇಬರಿಗೆ ಇನ್ನೊಮ್ಮೆ ದುಃಖದ ಪೂರ ಬಂದು ಹೋಯಿತು" ಹಮಾರೀ ಅಮ್ಮ ಬೀಡಿ ಕಟ್ಟಿ, ಕಟ್ಟಿ ಫ್ಯಾಕ್ಟರಿಗೆ ಮಾರತಿದ್ದರ್ರಿ. ಮನಿ ಮಂದೆಲ್ಲ ಮೆಹನತ್ ಕರಕು, ಕರಕು, ನನ್ನೊಬ್ಬಾವನ್ನ ಕಲೀ ಮಗ ಅಂತ ಇಸ್ಕೂಲಿಗೆ ಕಳಿಸಿದ್ದರ್ರಿ. ನಾ ಮೆಟ್ರಿಕ್ ಆಗಿ ಮಾಮಲೇದಾರ ಆಗತೇನೆಂತ ಅಪ್ಪ ಬಡಕೋತಿದ್ದ ಸ್ವಾಮಿ. ಹಂತ ಟೈಂದಾಗ ಊರಾಗ ಈ "ಕಿಸ್ಮತ್" ಪಿಚ್ಚರ್ ಬಂದಿತ್ತರಿ. ನಾ ನಾಲ್ಕನೇ ಸರ್ತೀಕೆ ಮೆಟ್ರಿಕ್ ಪರೀಕ್ಷಾಕ್ಕ ಕುಂತಿದ್ದೆರಿ. "ಕಿಸ್ಮತ್" ಪಿಚ್ಚರ್ ನನಗ ಒಂಥರಾ ಹುಚ್ಚ ಹಿಡಿಸಿತ್ತರಿ. ಇಸ್ಕೂಲು, ಓದೋದು, ಎಲ್ಲಾ ಛೋಡಕು, ಬಾರ ಬಾರ ಈ ಪಿಚ್ಚರ ನೋಡೋದ, ನೋಡೋದ ಸ್ವಾಮಿ. ಬಹುತಅಚ್ಛಾ ಪಿಚ್ಚರ್ ಸಾಬ, ಬಹುತ ಅಚ್ಛಾ ಪಿಚ್ಚರ್ ಏಕ ಬಾರ್ ಕ್ಯಾ ಹಂಪಾ ಸಾಬ್" ಎಂದು ಸಾಹೇಬರು ಉಮ್ಮಳಿಸಿ ಬರುತ್ತಿರುವ ತಮ್ಮ ಬಾಲ್ಯದ ನೆನಪುಗಳನ್ನು ಒಳ್ಳೆ ಉತ್ಸಾಹದಲ್ಲಿ ಬಣ್ಣಿಸತೊಡಗಿದರು"....ಕಿಸ್ಮತ್ ಪಿಚ್ಚರ್ ನೋಡಲಾಕ ರೊಕ್ಕ ಇದ್ದಿಲ್ಲಾಂತ ನಮ್ಮ ಅಬ್ಬಾ ಜಾನನ ಜೇಬಿಗೆ ಕೈ ಹಾಕಿದ್ದಾಗ ಪಕಡಾ ಗಯಾ ಸಾಬ.... ಕ್ಯಾ ಮಾರ ಖಾಯಾ... ಮನ್ಯಾಗಿನ ದೊಡ್ಡವರೆಲ್ಲ ಕೂಡಿ ಹೊಡದs ಹೊಡದರ್ರಿ.... ಹೊಡದs ಹೊಡದರ್ರಿ. ಮೂರು ದಿವಸ ಮನಿ ಮುಂದೆಲ್ಲ ನನಗ ಮೆಟ್ರಿಕ್ ಮೆಟ್ರಿಕ್ ಅಂತ ತಲಿ ಚಿಟ್ಟ ಹಿಡಿಸಿಬಿಟ್ಟರ್ರೀ... ನನಗೂ ಅವತ್ತ ಬಹಾಳ ಗುಸ್ಸಾ ಬಂತರೀ. ಸಿಟ್ಟಿನಾಗ "ಇಸ್ಕೀ ಅಮ್ಮಾ" ಬೇಕಾದ್ದಾಗಲಿ ಈ ಮ್ಯಾಟ್ರಿಕ್ ಪಾಸಾಗಾಣೆಲ್ಲ ಅಂತ ಶಪ್ಪತ್ ಮಾಡಿ, ಅವತ್ತs ಮನೀ ಬಿಟ್ಟು, ಕಿಸ್ಮತ್ ಪಿಕ್ಚರ್ ನಡೀತಿತ್ತಲ್ಲ ಸಾಬ ಅದs ಥೇಟರ್‌ನ ಹತ್ತರ ಒಂದ ಸಣ್ಣ ಪೆಟಿಗೆ ದುಂಕಾನ ಇಟ್ಟು, ಪಾನ, ಬೀಡಿ, ಸಿಗರೇಟು ಮಾರಾಟಕ್ಕ ಚಾಲೂ ಮಾಡಿದೆ ಸ್ವಾಮಿ. ಅಲ್ಲಾನ ಮೆಹರಬಾನಿ ಸಾಬ್, ಅಶೋಕ ಕುಮಾರನ ಪಿಕ್ಚರ್ ಹ್ಯಾಂಗ ಹ್ಯಾಂಗ ದುಡ್ಡ ಗಳಿಸಲಾಕ ಸುರು ಮಾಡಿತು, ಹಂಗ ನನ್ನ ಪೆಟ್ಟಿಗೆ ಅಂಗಡೀನೂ ಬೆಳೀಲಾಕ ಚಾಲೂ ಆತರೀ. ಮುಂದ ಮುಂಬೈಯಿಂದ ಒಂದು ಮಟಕಾ ಏಜನ್ಸಿ ಸಿಕ್ಕು, ಓಪನ್ ಕ್ಲೋಸ ನಂಬರಿನ ವ್ಯವಹಾರದಾಗ ಸಾಕಷ್ಟು ದುಡ್ಡು ಕೂಡಿತರಿ. ಮುಂದ ದೋ ತೀನ ವರಸದಾಗ ಸಣ್ಣಾಗಿs ಅಡಿಕೀ, ಟೆಂಗಿನ ಕಾಯಿ, ಎಲೀ ವ್ಯವಹಾರದಾಗ ಕೈ ಹಾಕಿದೆ, ಸಾಬ್ ಮುಂದ ಬಿಸಿನೆಸ್ ಬೆಳೆಧಂಗ ಸಿರಸಿ, ಸಿದ್ದಾಪುರ ಕಡೀಲಿಂದ ಅಡಿಕೀ ತರಿಸಿ ಹೋಲಸೇಲ ಯಾಪಾರ ಶುರು ಮಾಡಿದೆ ಸಾಹೆಬ್ರ. ಈಗ ಎರಡು ಟ್ರಕ್ಕು ಎರಡು ಟ್ಯಾಂಕರು ಇಟ್ಟು ಟ್ರಾನ್ಸಪೋರ್ಟ ವ್ಯವಹಾರನೂ ಚಾಲೂ ಮಾಡೇನ್ರಿ.

ಈಗ ಅಲ್ಲಾನ ಮೆಹರಬಾನಿಯಿಂದ ಮನೀ ತುಂಬ ಆಳು ಕಾಳು, ಬಚ್ಚೆ ಲೋಗ, ಬೀಬಿ ಲೋಗ, ಬಂಗ್ಲೆ ಎರಡೆರಡು ಕಾರು ...ಎಲ್ಲಾದಕ್ಕೂ ಈ "ಕಿಸ್ಮತ್" ಪಿಚ್ಚರನ ಕಾರಣ ಆತರಿ....ಅಶೋಕ ಕುಮಾರ ನಮ್ಮ ಪಾಲಿನ ಖುದಾ ಇದ್ದ್ಯಾಂಗ ಅಲ್ಲರೀ. ಆದರ ಪಾಪ, ನಮ್ಮ ಅಬ್ಬಾ ಜಾನ್ ಮಾತ್ರ ಗರೀಬಿ ಒಳಗ ಒದ್ದ್ಯಾಡಿ ಸತ್ತ ಹೋದನರಿ. ಮುದುಕ ಬರೇ ಮೆಟ್ರಿಕ್, ಮೆಟ್ರಿಕ್ ಅಂತ ಬಡಕೋಂತ ಮರ್‌ಗಯಾ ಸಾಬ.

ಆ ಅಲ್ಲಾನ ದಯದಿಂದ ಮೆಟ್ರಿಕ್‌ದ ಹುಚ್ಚು ಬಿಟ್ಟು, ಬಿಸಿನೆಸ್‌ದಾಗ ಕೈ ಹಾಕಿದೆ ಅಂತ, ಇಷ್ಟ ದೊಡ್ಡ ವ್ಯವಹಾರ, ಆಳು, ಕಾಳು, ಕಾರ್, ಟ್ರಕ್, ಬಂಗ್ಲೇ, ಬಚ್ಚೆ, ಎಲ್ಲ ಕಂಡೆ ಸ್ವಾಮಿ. ಇದೆಲ್ಲ ಬಿಟ್ಟು ಅದೊಂದು ಬಿಕನಾಸಿ ಮೆಟ್ರಿಕ್ ಆಗಿದ್ದರ ಏನಿತ್ತರೀ–ಭಾಳ ಆದರ ಒಂದು ರೆವಿನ್ಯೂದಾಗ ಹೆಡ್ ಕ್ಲರ್ಕ್ ಆಗಿ ಬಿದ್ದಿರತಿದ್ದೆ...." ಎಂದು ಸಾಹೇಬರು ತಮ್ಮ ಕತೆಯ ಜತೆಗೆ ತಮ್ಮ ಅಳುವನ್ನು ಪೂರ್ತಿ ನಿಲ್ಲಿಸಿದರು. ನಾನು ನನ್ನ ಬಿಕನಾಸಿ ಮೆಟ್ರಿಕ್ ನೆನೆಸಿಕೊಂಡು ಬಿಕ್ಕಲು ಪ್ರಾರಂಭಿಸಿದೆ.

ಸಂಜೀವಪ್ಪ ಕಾಳಿಂಗನಾಗರವೊಂದನ್ನು ಸಾಕುತ್ತಿದ್ದ. ಇದನ್ನು ಕಂಡ ಗೆಳೆಯ ಕೇಳಿದ. "ಇದೆಷ್ಟು ದಿವಸದಿಂದಾನೋ" ಎಂದು. ಹೆಂಡ್ತಿ ಸತ್ತಮೇಲೆ ಬಿಕೋ ಅಂತಿತ್ತು. ಈಗ ಮನೆಯೆಲ್ಲಾ ಬುಸ್ ಬುಸ್ ಅಂತ ಮೊದಲಿನಂತೆಯೇ ತುಂಬಿದೆ" ಎಂದ ಸಂಜೀವಪ್ಪ.

ದೂರದರ್ಶನದ ಭಾರತ ಮತ್ತು ನಾನು

—ಜಿ.ಎನ್.ಜಿ.

ಮಹಾಭಾರತ ಸೀರಿಯಲ್ಲು T.V. ಯಲ್ಲಿ ಮುಗಿಯಿತು ಸಧ್ಯ ! ಎಂದೆ. ನನ್ನಂಥ ಸಿನಿಕರಿಗೆ a sigh of relief. ನಾನು 'ಸಧ್ಯ ಮುಗೀತು' ಎಂದಾಗ ಆ ದಿನ ನಾನು ಬದುಕಿ ಉಳಿದದ್ದೇ ಒಂದು ಪವಾಡ.

ನಾನು ಹೇಳಿಕೇಳಿ ದಡ್ಡ. ಕೃಷ್ಣಶಾಸ್ತ್ರಿಗಳ ಭಾರತ ಓದಿದವ. ಡಾ|| ರಾಹಿ ಮಾಸುಂ ರಾಜಾ, ಬಿ. ಆರ್. ಛೋಪ್ರಾ ಸಾಹೇಬರ ಸಂಶೋಧನೆ ನನಗೆಲ್ಲಿ ಅರ್ಥ ಆಗಬೇಕು ?

ನನ್ನನ್ನೂ ಕೆಲವು ಸಮಸ್ಯೆಗಳು ತಲೆ ತಿನ್ನುತ್ತಿವೆ ನಿಜವಾಗಲೂ ಹಾಗೆ ಆಗ ಬಾರದು, ಯಾಕೆಂದರೆ ಮಹಾಭಾರತ ಸೀರಿಯಲ್ಲನ್ನ ಮೆಚ್ಚಿದವರೇ ಶೇ. 90ಕ್ಕೂ ಹೆಚ್ಚು ಜನ ಇರುವಾಗ ಲೋಕಾಭಿಪ್ರಾಯದಂತೆ ಡೆಮೋಕ್ರಸಿ ನಿಯಮದಂತೆ ಆ ಶೇ. 90 ಜನಕ್ಕೆ ತಲೆ ಇದೆ ಎಂದ ಮೇಲೆ ಉಳಿದ ಶೇ. 10ರಲ್ಲಿ ಒರುವ ನನಗೆ ತಲೆ ಇರಲೇಬಾರದು. ಇದ್ದರೂ ಒಳಗೇನೂ ಇರಬಾರದು. ನನಗೆ ಬಂದಿರುವ ದಡ್ಡ ಸಮಸೆ ಗಳೇನೆಂದರೆ :

1. ಇನ್ನು ಮುಂದೆ ಶೇ 90 ಜನ ಭಾನುವಾರ ಬೆಳಗ್ಗೆ 9 ರಿಂದ ಏನು ಮಾಡುತ್ತಾರೆ ? ಅಥವಾ ಅವರೇನು ಮಾಡಬೇಕು ? ಈ Vacuam ಅನ್ನು ಹೇಗೆ ತುಂಬಬಹುದು ? ಅದಕ್ಕಾಗಿ ಇನ್ಯಾವ ಪುರಾಣ ಯಜ್ಞಪಶು ಆಗಲು ಕುಳಿತಿದೆ ?

2. ಗಾಂಧಾರಿ ತನ್ನ ಕಣ್ಣು ಪಟ್ಟಿಯನ್ನು ಕಿವಿವರೆಗೆ ಮಾತ್ರ ಬರುವಂತೆ ಕಟ್ಟಿಕೊಳ್ಳುತ್ತಿದ್ದಳೆಲ್ಲ ಆಗಿನ ಕಾಲದಲ್ಲಿ ಪ್ಲಾಸ್ಟರು ಇತ್ತೆ ? ಕಣ್ಣು ಪಟ್ಟಿಗಳು ಪ್ರತಿ ವಾರವೂ ಅಷ್ಟು ಸ್ವಚ್ಛವಾಗಿರುತ್ತಿದ್ದು, ಎಲ್ಲಾ ದಿನವೂ ಬದಲಾಯಿಸುತ್ತಿದ್ದಳೆ ? ಮಹಾಭಾರತ ಮುಗಿಯುವವರೆಗೆ ಅಷ್ಟು ಅತ್ತಳಲ್ಲ ಕಣ್ಣು ಪಟ್ಟಿಯೊಳಗೆ ಯಾವ ಬ್ರ್ಯಾಂಡಿನ ಸ್ಯಾನಿಟರಿ ನ್ಯಾಪ್‌ಕಿನ್ ಉಪಯೋಗಿಸುತ್ತಿದ್ದಳು ?

3. ಯುದ್ಧ ಕಾಲದಲ್ಲಿ ಕೂಡ ಕೃಷ್ಣ, ಅರ್ಜುನ, ಧರ್ಮರಾಯ, ದುರ್ಯೋಧನ, ಯಾರೇ ವೀರರಿರಲಿ, ಅವರು ಮುಖಕ್ಷೌರ ಯಾವಾಗ ಮಾಡಿಕೊಳ್ಳು ತ್ತಿದ್ದರು ? ಅಂಥ ಪರಿಸ್ಥಿತಿಯಲ್ಲೂ ಅ ವ ರಿ ಗೆ ತಮ್ಮ disposition ಬಗ್ಗೆ, appearance ಬಗ್ಗೆ, ಗಮನ ಕೊಡಲು ಮನಃಸ್ಥಿತಿ ಸರಿಯಾಗಿದ್ದುದು ಆಶ್ಚರ್ಯ ವಲ್ಲವೆ ?

4. ಗಡ್ಡ ಇದ್ದವರೂ, ಇಲ್ಲದವರೂ ತಮ್ಮ ತಮ್ಮ ಪ್ರಾಸಾದನವನ್ನು ಮುಗಿಸಿಕೊಂಡ ನಂತರವೇ ಯುದ್ಧ ಪ್ರಾರಂಭವಾಗಬೇಕೆಂಬ ಬೈಲಾವನ್ನು ಭೀಷ್ಮ ಮಾಡಿದ್ದರೆ ?

5. ಭೀಷ್ಮ, ದ್ರೋಣ, ಶಕುನಿ, ಶಲ್ಯ ಇವರ ಗಡ್ಡಗಳು ಎಷ್ಟು systematic ಆಗಿ ಬೆಳೆಯುತ್ತಿದ್ದವಲ್ಲ, ಯುದ್ಧ ಕಾಲದಲ್ಲಿ ಕೂಡ ?

6. ಕುಂತಿಗೆ ಬಿಳಿಕೂದಲು ಎಷ್ಟು ಚೆಂದಾಗಿ ಬೈತಲೆ ಎರಡು ಭಾಗಗಳಲ್ಲಿ systematic ಆಗಿ–ಇತ್ತಲ್ಲಾಂತ ? ಕುಂತಿ ಒಂದೊಂದು ಸಲ ದ್ರೌಪದಿಗಿಂತಲೂ ಚಿಕ್ಕವಳಾಗಿ ಕಾಣುತ್ತಿದ್ದಳಲ್ಲ ? ಇದು ನನ್ನ ದೃಷ್ಟಿ ದೋಷ ಇರಬಹುದೆ ?

7. ರಥಗಳನ್ನು ರಚಿಸಲು ಛೋಪ್ರಾ ಸಾಹೇಬರು ಮೈಸೂರು ಟಾಂಗ (ಷಾ ಪಸಂದ್ ಗಾಡಿ) ಮಾಲೀಕರ ಸಲಹೆ ಪಡೆದಿದ್ದರೆ ?

8. ಭೀಮ ನಕ್ಕರೂ, ಗೆದ್ದರೂ, ಸೋತರೂ, ಬಿದ್ದರೂ, ಅತ್ತರೂ ಒಂದೇ ಥರ ಕಾಣುತ್ತಿದ್ದನಲ್ಲಾ. ಅದೂ ನನ್ನ ದೃಷ್ಟಿ ದೋಷ ಇರಬಹುದೆ ?

9. ಭೀಷ್ಮರ ಶರಮಂಚದ ಬಾಣಗಳು ಒಂದೇ ಆಳತೆಯಲ್ಲಿ ಅವರ ದೇಹವನ್ನು ಹೊಕ್ಕಿರಬೇಕಾದರೆ ಅರ್ಜುನ, ಶಿಖಂಡಿ ಇವರ ಬಾಣಗಳ ಉದ್ದ, ಅಗಲ, ದಪ್ಪಗಳನ್ನು ಭೀಷ್ಮರೇ suggest ಮಾಡಿದ್ದರೆ? ಬಾಣಗಳ ವೇಗವನ್ನು ಗುರಿಯನ್ನು ಅಷ್ಟು ನಿಖರವಾಗಿ ನಿರ್ಧರಿಸಿರಬೇಕಾದರೆ ಇಂದಿನ ಮಿಸ್ಸೈಲ್‌ಗಳಿಗಿಂತ ಅಂದಿನ ಬಾಣಗಳೇ ವಾಸಿಯಲ್ಲವೆ ?

10. ಕೌರವ, ಪಾಂಡವರಿಗೆ ಯುದ್ಧ ಕಾಲದಲ್ಲಿ ಕೂಡ ಯುದ್ಧ ನಿಂತಾಗ ಎಂದು ಇಟ್ಟುಕೊಳ್ಳಬೇಕಾದರೆ ತಮ್ಮ ಮಾತೃಶ್ರೀ, ಪಿತಾಶ್ರೀ, ಇತ್ಯಾದಿ ಶ್ರೀಗಳನ್ನು ಕಂಡು ಬರುವ ವೇಳೆಗಳನ್ನು ಯಾರು ನಿರ್ಧರಿಸಿದ್ದರು ? ಉಳಿದವರಿಗೆ ಆ ಅನುಕೂಲ ಇರಲಿಲ್ಲವೆ ? ಈಗಿನ ಯುದ್ಧಗಳಲ್ಲಿ ಇಂಥ ಅನುಕೂಲಗಳನ್ನು ಮಾಡಿಕೊಡಲು ಸಾಧ್ಯವೆ?

ಇವೆಲ್ಲಾ ನನ್ನ ತಲೆ ತಿನ್ನುತ್ತಿವೆ. ನನ್ನನ್ನು ನೀವು ಗುಗ್ಗು ಎನ್ನಬಹುದು. ಅಥವಾ ನಿಮ್ಮ ತಲೆಯನ್ನು ತಿನ್ನುತ್ತಿರಬಹುದು. ಅದು ದ್ವಾಪರ ಯುಗ, ಈಗಿನ ತರಹ ಕಳ್ಳ ಯುದ್ಧ ಮಾಡುತ್ತಿರಲಿಲ್ಲ. ಒಂದೆರಡು ಪ್ರಮಾದಗಳೇ ಅಥವಾ ಆಮೋದ ಪ್ರಮೋದಗಳೇ ಪ್ರಮಾದಗಳಾಗಿಬಿಟ್ಟವು. ದೊಡ್ಡ ಮಗನ ಮಗನಾದ ದುರ್ಯೋಧನ ಈಗ supreme ಕೋರ್ಟಿಗೆ ಹೋಗಿದ್ದರೆ ಏನಾಗುತ್ತಿತ್ತು ?

ಏನೂ ಆಗುತ್ತಿರಲಿಲ್ಲ ಏಕೆಂದರೆ Supreme Court ಗೇ ಹೋಗುತ್ತಿರಲಿಲ್ಲ. ಶಕುನಿ ಇಂಥವನನ್ನು ನ್ಯಾಯಾಧೀಶನನ್ನಾಗಿ ಮಾಡಿ ಒಂದು ಜಡ್ಜ್ ಕಮಿಷನ್ ನೇಮಕ ಮಾಡಬಹುದಿತ್ತು. ಅಲ್ಲಿಯವರೆಗೆ ದುರ್ಯೋಧನನೇ ರಾಜನಾಗಬಹುದಿತ್ತು. ಕಮಿಷನ್‌ಗಳ ತೀರ್ಮಾನ ಬರುವ ಹೊತ್ತಿಗೆ ದ್ವಾಪರ ಯುಗವೇ ಮುಗಿಯುತ್ತಿತ್ತು. ಜನಗಳಿಗೂ ಧರ್ಮರಾಯ ಯಾರು ? ಎಂಬುದು ಮರೆತುಹೋಗುತ್ತಿತ್ತು.

ವಿಚಾರಣೆ ನಡೆಯುತ್ತಿತ್ತು–ನಿಲ್ಲುತ್ತಿರಲಿಲ್ಲ–ತೀರ್ಮಾನ ಬಂದೇ ಬರುತ್ತಿತ್ತು. ಅಷ್ಟು ಹೊತ್ತಿಗೆ ವಿಚಾರಣೆ ಯಾವ ವಿಷಯವಾಗಿ ನಡೆದಿತ್ತು ಎಂಬುದೇ ಮರೆತ ಹೋಗುತ್ತಿತ್ತು. ಇದೆಲ್ಲಾ ಈಗಿನ ದಿನಗಳಲ್ಲಿ ನಡೆದಿದ್ದರೆ !

God sees the truth but waits—ಅಲ್ಲ—commission finds the truth but the Government waits.

ಮಹಾ ಭಾರತ ಸೀರಿಯಲ್ಲು ನಿಜಕ್ಕೂ ಇಂದಿನ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿದಿದೆ ಜನಕ್ಕೆ. ಅಂದೂ ಹಾಗೇ ಇತ್ತು, ಇಂದೂ ಹಾಗೇ ಇದೆ ಎನಿಸಿದೆ. ಆಗಲೂ ಗಾದಿಗೆ ಬಡಿದಾಟ. ಈಗ ಹಲವು ಗಾದಿಗಳಿಗೆ ಬಡಿದಾಟ. ಆಗ ಜೂಜಾಟ, ಈಗ ಚುನಾವಣೆ. ಆಗ ಒಬ್ಬ ಶಕುನಿ ಈಗ ಊರಿಗೊಬ್ಬ ಶಕುನಿ. ಎಲ್ಲರೂ ಶಕುನಿಗಳೇ. ಧರ್ಮರಾಯನನ್ನು ಹುಡುಕಬೇಕಾಗಿದೆ.

ಒಂದು ತಮಾಷೆ ಎಂದರೆ T.V.ಲಿ ತ್ರೇತಾಯುಗ–ದ್ವಾಪರ ಯುಗಗಳನ್ನು ನೋಡಿದ ನಮ್ಮ ಜನಕ್ಕೆ ಕಲಿಯುಗದ ಜನರೂ ಅವರಿಗಿಂತ ಬೇರೆ ಅಲ್ಲ. ಕಲಿಯುಗದ ಜನ ಕಲಿತಿರುವುದೇ ಬೇರೆ. ಕೊನೆಯ ಸಮಸ್ಯೆ ಏನೆಂದರೆ ರಣರಂಗದಲ್ಲಿ 18 ಅಧ್ಯಾಯ ಗೀತೆಯನ್ನು ಕೃಷ್ಣನಿಂದ ಅರ್ಜುನ ಕೇಳಿಸಿಕೊಂಡನಲ್ಲ. ಆಗ ಮಲಗಿದ್ದ ಸೈನಿಕರನ್ನು ಎಬ್ಬಿಸಲೆಂದೇ ಶಂಖಗಳನ್ನು ಊದಿದರೆ ? ಅಥವಾ ಸೈನ್ಯ ಹಾಗೇ ನಿಂತಿತ್ತೆ ? ಅಥವಾ ಸೈನ್ಯಕ್ಕೆ time out ಕೊಟ್ಟಿದ್ದರೆ ?

ನೀವೇನಂತೀರಾ ?



"ಇನ್ಮ ಮೇಲೆ ರೈಲು ಬಸ್ಸು ಎಲ್ಲಾದರೂ ರಿಸರ್ವೇಷನ್ ಬಹು ಸುಲಭವಾಗಿ ಸಿಗುತ್ತೆ. ಸುಮ್ಮನೆ ಯಾಕ್ರಿ ಮಂಡಲ್ ಕಮಿಷನ್ ಮೇಲೆ ಎಗರಾಡ್ತೀರಾ ?"

29

ಯಾತ್ರಿಕರ ಪತ್ರ

—ಕೇಫ

ಪ್ರಿಯ ಸಂಪಾದಕರೇ/ನಷ್ಟಿತರೇ,

ಶಿಂಗಪುರದಿಂದ ಈ ಪತ್ರ ಬರೆಯುತ್ತಿದ್ದೇನೆ. ಈ ಶಿಂಗಪುರ–ಸಿಂಗ್‌ಪೂರ್ ಅಲ್ಲ —ನಮ್ಮ ತಲಕಾಡು ಹಾದಿಯಲ್ಲಿರೋ ಸಿಂಗಪುರ. ಇಲ್ಲೇ ನಿನ್ನೆ ರಾತ್ರಿ ತಲ್ಪಿ, ತಂಗಿ, ಪತ್ರ ಬರೆದು, ಈ ಊರು ಬಿಡುವ ಮುಂಚೆ ಅಂಚೆ ಪೆಟ್ಟಿಯಲ್ಲಿ ಹಾಕಿದ್ದೇವೆ. ನಿಮಗೆ ತಲ್ಪಿದರೆ ಪ್ರಕಟಿಸಿ. ಇಲ್ಲಿಯ ವಿಷಯಗಳು ತಿಳಿಯುತ್ತೆ. ನಮ್ಮ ಅಂಚೆ ಇಲಾಖೆಯ ಇತ್ತೀಚಿನ ಬಡ್ತಿಗಳಿಂದಾಗಿ—ಈ ಪತ್ರ ನಿಮ್ಮ ಕೈ ಸೇರದಿದ್ದರೆ ನಮ್ಮ ಪತ್ರಕ್ಕೆ ಬದಲಾಗಿ ಅಲ್ವಿದಾಯೋ ಪ್ರಕಟಿಸಿ.

ಈ ಪತ್ರ ಬರೆದು ಲಕೋಟೆಯಲ್ಲಿರ್ಸಿ ಅಂಚೆ ಮನೆಗೆ ಹೋಗಿ ಅಂಚೆ ಸ್ಟಾಂಪಿನ ಜೊತೆ 20 ಪೈಸೆ ಸ್ಟಾಂಪ್ ಕಾಗದಕ್ಕೆ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಕೇಳಿದಾಗ ಎರಡು ರೂಪಾಯಿ ಸ.ಆ ಪೋ ಈಗ ಅಂತ ತಿಳಿಯಿತು. ನಾನು ಅವಾಕ್ಕಾದೆ. ಪೋಸ್ಟ್ ಬಾಕ್ಸಿನಲ್ಲಿ ಹಾಕಲು ಎಷ್ಟು—ಕೇಳಿದೆ. ಪೊ ಮಾ. ಕಣ್ಣು ಕೆಂಪು ಮಾಡಿ ಕೊಂಡು, ಹಾಕ್ರೀ ಸುಮ್ನೇ—ಅಂದರು.

ನಾನವರಿಗೆ ಸಲಹೆಮಾಡಿದೆ—ಬಿಟ್ಟಿ ಯಾಕ್ರೀ ಅಂಚೆ ಪೆಟ್ಟೀಲಿ ಹಾಕೋಹಾಗೆ ಮಾಡಿದ್ದೀರಿ ? ಒಂದು ಸ್ಲಾಟ್ ಮಾಡಿಸಿ. ಅದರಲ್ಲಿ 10 ಯಾ 20 ಪೈಸೆ ನಾಣ್ಯ ಹಾಕಿದರೆ—ಒಂದು ಕಾರ್ಡ್ ಯಾ ಕವರ್ ಯಾ ಲೆಟರ್ ತೂರುವಷ್ಟು ಮಾತ್ರ ಬಾಯಿ ತೆರೆಯುತ್ತೆ. ಅದರಲ್ಲಿ ಅಂಚೆ ಹಾಕಿಸಿಕೊಳ್ಳಿ ನಿಮಗೆ ಪ್ರತಿ ಪತ್ರಕ್ಕೆ 10 ಯಾ 20 ಪೈಸೆ ಬರುತ್ತೆ. ಇದನ್ನು ನೀವು ಮೇಲಿನವರಿಗೆ ಸಲಹೆ ಮಾಡಿ, ಬಡ್ತಿ ಪಡೆಯಿರಿ ಅಂದೆ. ಪೋ ಮಾ. ಮುಲುಕು ಹಾಕುತ್ತಿದ್ದಾರೆ.

ಮುಂದಿನ ಬಜೆಟ್ ಸಮಯದಲ್ಲಿ ಈ ರೀತಿ ಮಸೂದೆ ಬಂದರೆ ಅದರ ಸ್ಕೋಪ್ ಅಪರಂಜಿಗೇ ಸೇರಿದ್ದು ಅಂತ ಮುಂದೆ ತಿಳ್ಸಿ. ಮ್ಯಾಗ್ಸೆಸೇ ಅವಾರ್ಡ್ ಬಂದರೂ ಬಂದೀತು.

ಶಿಂಗಪುರದಲ್ಲಿ ವಿಶೇಷವೇನಿಲ್ಲ. ಇಲ್ಲಿಯ ಕಸ್ತೂರ್‌ಬಾ ಗಲ್ಲಿಯಲ್ಲಿ ಕಳೆದವಾರ ಒಬ್ಬಾಕೆ ತನ್ನ ಗಂಡನನ್ನೇ ಮಚ್ಚಿನಿಂದ ಕೊಂದು ಹಾಕಿದ ಪ್ರಸಂಗ ತಿಳಿಯಿತು. ಆಕೆ ನಾಪತ್ತೆಯಾಗಿದ್ದಾಳೆ. ಆಕೆಯನ್ನು ಪತ್ತೆ ಮಾಡಲು ಹೋಗಿರುವ ಪೋಲೀಸ್ ಪ್ಯಾದೆಯೂ ನಾಪತ್ತೆಯಾಗಿದ್ದಾನೆ.

ಮೂರು ದಿನಗಳ ಹಿಂದೆ ಇಲ್ಲಿಯ ಬಸ್ ಸ್ಟ್ಯಾಂಡಿನಲ್ಲಿ ಅನುಮಾನಾಸ್ಪದ ರೀತಿಯಲ್ಲಿ ತಿರುಗುತ್ತಿದ್ದ ಮೂವರು ಯುವಕರನ್ನು ಪೋಲೀಸರು ಹಿಡಿದು ಚೆನ್ನಾಗಿ ಥಳಿಸಿದ ಮೇಲೆ ಆ ಮೂವರೂ ಪದವಿಧರರೆಂದೂ ಒಂದು ಇಂಟರ್‌ವ್ಯೂಗೆ ಬೆಂಗಳೂರಿಗೆ ಹೋಗಲು ಹಣವಿಲ್ಲದೆ ಟಿಕೆಟ್ ಪಡೆಯದೆ ಪ್ರಯಾಣ ಮಾಡುತ್ತಿದ್ದರೆಂದೂ ತಿಳಿದು ಬಂತು.

ಆದರೂ ಚಾಣಾಕ್ಷ ಪೋಲೀಸರು ಆ ಮೂವರನ್ನೂ ಟೆರರಿಸ್ಟ್ಸ್ ಇರಬಹುದೆಂಬ ಅನುಮಾನದ ಮೇಲೆ ಎರಡು ದಿನ ಲಾಕಪ್ಪಿನಲ್ಲಿಟ್ಟು, ಮುಂದೇನು ಮಾಡಬೇಕೆಂದು ತಿಳಿಯದೆ ಅವರನ್ನು ಬಿಡುಗಡೆ ಮಾಡಿದರಂತೆ. ಅವರೆಲ್ಲಿಗೆ ಹೋದರೋ—ಯಾರಿಗೂ ತಿಳಿಯದು.

ಮತ್ತೊಂದು ಧಿಡೀರ್ ದಾಳಿಯಿಂದ ಇದೇ. ಚಾ. ಪೋಲೀಸರು ನಾಲ್ಕು ಭಯಂಕರ ಪಿಕ್‌ಪಾಕೆಟ್ ಗ್ಯಾಂಗ್ ಬಾಲಕರನ್ನು ಅವರ ಹೈಡೌಟ್‌ನಿಂದ ಹೊರಗೆಳೆದರು. ಅವರಿಂದ ನಾಲ್ಕು ಕಟ್ಟು ಗಣೇಶ್ ಬೀಡಿ, ಎರಡು ಬೆಂಕಿಪೆಟ್ಟಿ, 85 ಪೈಸೆ, ಮೂರು ಹರಕು ಟವಲು, ಎರಡು ಪ್ಲಾಸ್ಟಿಕ್ ಕಾರ್, ಒಂದು ಕ್ಯಾಟರ್ ಬಿಲ್ ವಶಪಡಿಸಿಕೊಂಡಿದ್ದಾರೆ. ನಾಲ್ವರು ಬಾಲಕರನ್ನೂ ಚೆನ್ನಾಗಿ ಥಳಿಸಿ, ಪ್ರತಿದಿನ ಪೋಲೀಸ್ ಠಾಣೆಗೆ ಹಾಜರಾಗಬೇಕೆಂದು ವಿಧಿಸಿದ್ದಾರೆ.

ಶಿಂಗಪುರದಲ್ಲಿ ಪ್ರೈಮರಿ, ಮಿಡಲ್, ಹೈಸ್ಕೂಲುಗಳಿವೆ. ಮಿಡಲ್ ಮತ್ತು ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಲ್ಲ. ಪ್ರೈಮರಿ ಶಾಲೆಯಲ್ಲಿ ಮಾಸ್ತರಿಲ್ಲ, ಮೂರೂ ಶಾಲೆಗಳಲ್ಲಿ ಪೋಲೀಸ್ ಉಸ್ತುವಾರಿಯಲ್ಲಿ ರಮ್ಮೀ ಪರೇಲಾ ಪಾರ್ಟಿ ಸೇರುತ್ತಿವೆ.

ಇಲ್ಲಿಯ ಆಸ್ಪತ್ರೆಯಲ್ಲಿ ಒಂಭತ್ತು ವರ್ಷಗಳಿಂದ ಡಾಕ್ಟರಿಲ್ಲ ಊರಿನ ನಾಟೀ ಪಂಡಿತ ಗುರಪ್ಪನೇ ಕಾಂಪೌಂಡರು, ಡಾಕ್ಟರು ಕೂಡ.

ಇಂದು ಒಂದು ಅನಿರೀಕ್ಷಿತ ಘಟನೆ ನಡೆದಿದೆ. ಶಿಂಗಪುರಕ್ಕೆ ಅರ್ಧ ಕಿಲೋಮೀಟರ್ ದೂರದಲ್ಲಿರುವ ಒಂದು ಮನೆಯನ್ನು ಹಗಲಿನಲ್ಲೇ ದರೋಡೆಗಾರರು ನುಗ್ಗಿ, ಆಳನ್ನು ಕೊಂದು, ಯಜಮಾನನಿಗೆ ಚೂರಿಯಿಂದ ಘಾಯಪಡಿಸಿ, ಯಜಮಾನಿಯನ್ನು ರೂಮಿನಲ್ಲಿ ಕೂಡಿಹಾಕಿ, ಬೀಗ ಹಾಕಿ, ಮನೆಯನ್ನು ಪೂರ್ತಿ ದೋಚಿಕೊಂಡು ಪರಾರಿಯಾದರು. ಕೂಡಲೇ ಪೋಲೀಸರು ಅಲ್ಲಿಗೆ ಧಾವಿಸಿದರು. ಆಳಿನ ಕಳೇಬರವನ್ನೂ, ಯಜಮಾನ–ಯಜಮಾನಿಯರ ಕಿರ್ಲಾಟವನ್ನೂ ಲೆಕ್ಕಿಸದೆ ದರೋಡೆಗಾರರನ್ನು ಹುಡುಕುತ್ತಾ ಓಡಿದರು. ಒಂದು ಘಂಟೆ ಕಾಲ ಹುಡುಕಿ, ನಿರಾಶರಾಗಿ

ಪೋಲೀಸ್ ಠಾಣೆಗೆ ವಾಪಸಾದರು. ಠಾಣೆಯಲ್ಲಿದ್ದ ಎರಡು ಬಂದೂಕು, ನಾಲ್ಕು ಲಾಠಿಗಳು, ನಾಲ್ಕು ಜೊತೆ ಕೈ ತೋಡಗಳು, ಒಂದು ಪೆಟ್ರೊಮ್ಯಾಕ್ಸ್ ಮಾಯ ವಾಗಿದ್ದವು.

ಶಿಂಗಪುರ ಮತ್ತೆಲ್ಲ ರೀತಿಯಲ್ಲೂ ಶಾಂತವಾಗಿತ್ತು. ನಾವು ನಮ್ಮ ಪ್ರಯಾಣ ಮುಂದುವರೆಸಿದೆವು.

ಕಾಶೀಯಾತ್ರೆ ಮುಗಿಸಿಕೊಂಡು. ರುದ್ರಾಕ್ಷಿ ಮಾಲೆ, ವಿಭೂತಿ ಧರಿಸಿದ ಶ್ರೀ ರಾಮರಾಯರು ತಮ್ಮೂರಿಗೆ ಹಿಂದಿರುಗಿದರು, ರೈಲು ನಿಲ್ದಾಣದಲ್ಲಿ ಪಾನ ನಿರೋಧ ದಳದವರು ಇವರ ಬಳಿ ಇದ್ದ ನಾಲ್ಕು ಬಿಂದಿಗೆಗಳನ್ನು "ಕಂಡು ಏನಿದೆ ಇವುಗಳಲ್ಲಿ" ಎಂದು ಕೇಳಿದರು. ಕಾಶಿಯಿಂದ ತಂದ ಗಂಗಾಜಲ. ಸಾಯೋಕಾಲಕ್ಕೆ ಬೇಕಾಗುತ್ತೆ ಎಂದರು ರಾಮರಾಯರು. ಏನೋ ಅನುಮಾನ ಬಂದು ದಳದವರು ಒಂದು ಬಿಂದಿಗೆ ಮುಚ್ಚಳ ತೆಗೆಸಿದರು. "ಏನ್ರೀ, ಸಾರಾಯಿ ವಾಸನೆ ಹೊಡೀತಾ ಇದೆ" ಎಂದರು

"ಹಾಗೇ ! ದೇವರ ಮಾಯ ! ಗಂಗಾಂಬಿಕೆಯ ಪವಾಡ. ಕಾಶೀಲಿ ನೀರು ತುಂಬಿದರೆ ಇಲ್ಲಿ ಸಾರಾಯಿಯಾಗಿದೆ". ಎಂದು ಉದ್ಗಾರ ತೆಗೆದು ರಾಮರಾಯರು ಕೈ ಜೋಡಿಸಿ "ಸ್ವಾಮಿ, ಪವಿತ್ರವಾದ್ದು ಸಾಯೋ ಕಾಲಕ್ಕೆ ಇರಬೇಕಾದ್ದು. ನೀವು ಒಂದು ಬಿಂದಿಗೆ ಮನೆಗೆ ತೊಗೊಂಡು ಹೋಗಿ" ಎಂದು ಬಿನ್ನವಿಸಿಕೊಂಡರು.

ನಾಮಕರಣದ ಸಮಸ್ಯೆ

— ಲೀಕ್ಸ್

ಭುಜಂಗರಾಯರ ಮದುವೆಯು ಸಂಭ್ರಮ
ವಧು ಕನ್ಯಾಮಣಿಯು ಸೆಂಟಿನ ಘಮ ಘಮ
ಪತಿಗೆ ಹಳೆಯ ಸಂಪ್ರದಾಯದ ಹುಚ್ಚು
ನೂತನ ಪತ್ನಿಗೆ ಕ್ಲಬ್ ವ್ಯವಹಾರದ ಮೆಚ್ಚು
ಆರೋಗ್ಯ ದೃಷ್ಟಿಯಿಂದ ಪತಿಯ ಪೇಯ ಕಾಂಪ್ಲೇನ್
ದಿನವೆ ಕಳೆಯದು ಪತ್ನಿಗೆ ಇಲ್ಲದೆ ಶಾಂಪೈನ್
ಉರುಳಿದವು ವರುಷಗಳು ಎಂಟು
ಏಕೋ ಏನೋ, ಸರಿ ಹೋಗಲಿಲ್ಲ ದಂಪತಿಗಳ ನಂಟು
ದಂಪತಿಗಳಿಗೆ ಮಕ್ಕಳಿಲ್ಲದೆ ಚಿಂತೆ ಕಾಡಿತು
ಪತ್ನಿಗೆ ತಾನು ಬಂಜೆಯೋ ಎಂಬ ಭೀತಿ ಮೂಡಿತು
ಎಲ್ಲ ದೇವತೆಗಳಿಗೂ ಹರಕೆ ಹೊತ್ತನು ಗಂಡೆಂಬ ಪ್ರಾಣಿ
ನಂಬಿಕೆ ಇಲ್ಲದಿದ್ದರೂ ಅನುಸರಿಸಿದಳು ಭುಜಂಗರಾಯನ ರಾಣಿ
ದೇವರಿಗೂ ಅರಿವಾಗಿರಬೇಕು ದಂಪತಿಗಳ ಕಳವಳದ ವಸ್ತು
ಅಂದು ರಾತ್ರಿ ಕನಸಿನಲಿ ಅವಳಿಜವಳಿ ಗಂಡು ಶಿಶುಗಳ ವರ ತಥಾಸ್ತು
ಒಂಭತ್ತು ವರ್ಷಗಳ ಅನಂತರ ಗಜಗರ್ಭದಂತೆ
ಭುಜಂಗರಾಯನ ರಾಣಿ ಅವಳಿಜವಳಿ ಗಂಡು ಶಿಶುಗಳಿಗೆ ಜನ್ಮವಿತ್ತಳಂತೆ
ಹಳೆಯ ಸಂಪ್ರದಾಯದ ಭುಜಂಗರಾಯ
ನಾಮಕರಣ ಮಾಡಿದನು ಒಂದು ಶಿಶುವಿಗೆ ಏಕಾಂಬರ್
ಇನ್ನೊಂದು ಶಿಶುವಿಗೆ ಶ್ವೇತಾಂಬರ್
ಎರಡು ವರ್ಷಗಳ ಅಂತರದ ಅನಂತರ
ಮತ್ತೆ ಅವಳಿ ಜವಳಿ ಗಂಡು ಕಂದಗಳ ಅವಾಂತರ
ಹುಮ್ಮಸ್ಸು ಕಡಿಮೆಯಾಗದ ಪತಿರಾಯ
ಒಂದು ಮಗುವಿಗೆ ದಿಗಂಬರ್
ಇನ್ನೊಂದು ಮಗುವಿಗೆ ಔದುಂಬರ್ ಎಂದು ಹೆಸರಿಟ್ಟನು
ಬಂಜರು ಭೂಮಿ ಫಲವತ್ತಾದಂತೆ
ಮೂರನೇ ಸಲವೂ ಭುಜಂಗರಾಯನ ರಾಣಿಗೆ

ಅವಳಿ ಜವಳಿ ಗಂಡು ಶಿಶುಗಳ ಕಾಣಿಕೆ
ಎರಡು ಪಾರ ಕಳೆದರೂ ಭುಜಂಗರಾಯನು
ಸ್ಫೂರ್ತಿ ಇಲ್ಲದೆ ಮಂಕು ಬಡಿದವನಂತೆ ಇದ್ದನು
ತಾಳ್ಮೆ ಇಲ್ಲದೆ ಪತ್ನಿ ಕೇಳಿದಳು
ಈ ಸಲ ನಿಮಗೆ ಹೆಸರುಗಳು ಹೊಳೆಯಲಿಲ್ಲವೆ ?
ಪತಿಯಿಂದ ಉತ್ತರವೇ ಬರಲಿಲ್ಲ
ಹೋಗ್ಲಿ ನಾನೇ ಸೂಚಿಸುತ್ತೇನೆ, ಸೂರ್ಯ ಚಂದ್ರ
ಇರುವವರೆಗೂ ಈ ಹೆಸರುಗಳು ಮರೆಯುವಂತಿಲ್ಲ
ಒಂದು ಮಗುವಿಗೆ ನವೆಂಬರ್, ಇನ್ನೊಂದು ಮಗುವಿಗೆ
ಡಿಸೆಂಬರ್ ಹೇಗಿದೆ ?

"ಇವತ್ತೇನಾಯ್ತು ಅಂತಿ"

"ನಂಗೇನು ಗೊತ್ತೋ ಹೇಳಿದರಲ್ಲವೇ ತಿಳಿಯೋದು"

"ದೆವ್ವದ ಕತೆ ಓದುತ್ತಾ ಕೂತಿದ್ದೆ, ಮನಸ್ಸೆಲ್ಲಾ ಕತೆಮೇಲೇ ಇತ್ತು. ಯಾಕೋ ಭಯ ಆಯಿತು. ಬಾಗಿಲ ಕಡೆಗೆ ನೋಡಿದೆ. ದೆವ್ವಾನೇ ನಿಂತಿದ್ದ ಹಾಗೆ ಕಂಡಿತು. ಅಯ್ಯಯ್ಯೋ ಎಂದು ಕೂಗಿದೆ.

'ಯಾಕಪ್ಪಾ ! ಏನಾಯ್ತಪ್ಪ' ಅಂತ ಬಾಗಿಲುವಾಡದಲ್ಲಿ ನಿಂತಿದ್ದ ಅತ್ತೆ ಕೇಳಿದರು."



ಬೆಂಗಳೂರು ಇಂದು!?

— ನಳಿನೀ ಪ್ರಿಯ

ಪೆಟ್ರೋಲ್ ಪಟುಗಳು

ಶನಿವಾರ ಮಧ್ಯಾಹ್ನ ಆಫೀಸಿನಲ್ಲಿ ಕುಳಿತಿದ್ದೆ. ಮಿತ್ರ ಪ್ರಸಾದ್ ಇದ್ದಕ್ಕಿದ್ದಂತೆಯೇ ಅವತರಿಸಿದ. "ಏನು ಗುರೂ ?" ಅಂತ ನಾನು ಕೇಳಲಿಲ್ಲ. ಏಕೆಂದರೆ ನಾವೆಲ್ಲಾ ಈ ಗುರು ಜನರೇಷನ್‌ಗಿಂತ ಹಿಂದಿನವರು. ಸಭ್ಯತೆಯಿಂದ "ಹಲೋ ಪ್ರಸಾದ್, ಹೇಗಿದ್ದೀ ?" ಅಂತ ಕೇಳಿದೆ.

"ಏನು ಹೇಳಲಿ ನನ್ನ ಬವಣೆ !" ಅಂತ ನಿಟ್ಟುಸಿರು ಬಿಟ್ಟ. ಅವನೇ ವಿವರಿಸಲಿ ಅಂತ ನಾನು ಸುಮ್ಮನೆ ಕೂತೆ.

ಆಸಾಮಿ ಶುರು ಮಾಡಿದ.

"ನಮ್ಮಪ್ಪ ನನಗೆ ಮುಂಜಿ ಮಾಡಿದಾಗ ನನಗೆ ಏಳು ವರ್ಷ. ಮುಂಜಿ ಆದ ಮೇಲೆ ಪ್ರತಿ ಶ್ರಾವಣ ಶನಿವಾರ ಇಪ್ಪತ್ತೊಂದು ಮನೆಗಳಿಗೆ ಹೋಗಿ "ಭವತಿ ಭಿಕ್ಷಾಂದೇಹಿ" ಅಂತ ಕೂಗಿ ಅಕ್ಕಿ ಭಿಕ್ಷೆ ತರಬೇಕು ಅಂತ ಆದೇಶ. ನನಗೋ ಬಲ್ರ ಸಂಕೋಚ. ಹಾಗಾಗಿ ಅಮ್ಮನಿಂದ ರೆಕಮೆಂಡೇಷನ್ ತೊಗೊಂಡು ಈ ಭಿಕ್ಷೆ ಡ್ಯೂಟಿಯಿಂದ ತಪ್ಪಿಸಿಕೊಂಡುಬಿಟ್ಟಿದ್ದೆ. ಆ ಪಾಪ ಈಗ ಸುತ್ತಿಕೊಂಡಿದೆ."

"ಅಂಥಾದ್ದೇನಾಯಿತು ?"

"ಇನ್ನೇನು. ಸ್ಕೂಟರಿನಲ್ಲಿ ಪೆಟ್ರೋಲ್ ರಿಸರ್ವ್‌ಗೆ ಬಂದಿತ್ತಲ್ಲಾ, ಇನ್ನು ನಾಳೆ ಬೇರೆ ಭಾನುವಾರ, ಇವತ್ತೇ ಹಾಕಿಸಿಬಿಡೋಣ ಅಂತ ಮನೆ ಹತ್ತಿರದ ಬಂಕಿಗೆ ಹೋದರೆ, ಒಂದು ಮೈಲಿ ಕ್ಯೂ. ಕ್ಯೂನಲ್ಲಿ ಯಾರು ಕಾಯ್ತಾರೆ ಅಂತ ಬೇರೆ ಬಂಕಿಗೆ ಹೋದೆ ಅಲ್ಲಿ ಕ್ಯೂ ಇರಲಿಲ್ಲ. ಪೆಟ್ರೋಲೂ ಇರಲಿಲ್ಲ. ಹಾಗೇ ಸುತ್ತಾಡಿ, ಸುತ್ತಾಡಿ. ಇಪ್ಪತ್ತೊಂದು ಬಂಕುಗಳ ದರ್ಶನ ಆದ ಮೇಲೆ ನಾಲ್ಕು ಲೀಟರ್ ಪೆಟ್ರೋಲ್ ಸಿಕ್ತು. ಪೆಟ್ರೋಲ್ ಭಿಕ್ಷೆ ಬೇಡಿದರೆ ಪುಣ್ಯ ಬರುತ್ತೇನೋ ?" ಅಂತ ಪ್ರಶ್ನಿಸಿದ.

"ಅದೇನೋ ಗೊತ್ತಿಲ್ಲಪ್ಪ. ಇಪ್ಪತ್ತೊಂದು ಗಣೇಶ ನೋಡಿದರೆ ಶ್ರೇಯಸ್ಸು ಅಂತ ಹೇಳ್ತಾರೆ. ಎಲ್ಲ ಬಂಕ್‌ಗಳಲ್ಲೂ ''No stock'' ಬೋರ್ಡ್‌ಗಳ ಮೇಲೆ ಗಣೇಶನ ಫೋಟೋ ಅಂಟಿಸಬೇಕು ಅಂತ ಪತ್ರಿಕೆಗಳಿಗೆ ಬರಿ" ಅಂತ ನನಗೆ ತೋಚಿದ ಪರಿಹಾರ ಹೇಳಿದೆ.

ಅಪಾಯಕರ ವೃತ್ತಿ

ಪಟಾಕಿ ತಯಾರಿಸೋದು, ರಾಸಾಯನಿಕ ಕಾರ್ಖಾನೇಲಿ ಕೆಲಸ ಮಾಡೋದು, ಇಂಥ ಅಪಾಯಕರ ವೃತ್ತಿಗಳ ಪಟ್ಟಿಯಲ್ಲಿ ಕನ್ನಡ ಪುಸ್ತಕ ಪ್ರಕಾಶನ ಸಹಾ ಸೇರಿಸ ಬೇಕು ಅಂತ ನಮ್ಮ ಸುಬ್ಬಣ್ಣನ ವಾದ.

"ಯಾಕೆ ಹಾಗೆ ಹೇಳ್ತಿ ? ಸ್ವಲ್ಪ ಹಣ ಕೈ ಬಿಡಬಹುದು, ಅಪಾಯ ಎಲ್ಲಿಂದ ಬಂತು ?" ಅಂತ ಕೇಳಿದೆ.

"ಅದನ್ನೇನು ಕೇಳ್ತೀಯ, ಬರೀ ಲಾಭ ನಷ್ಟದ ವಿಷಯ ಅಲ್ಲ ನಾನು ಹೇಳ್ತಿರೋದು. ಮಾರಾಟವಾಗದೇ ಉಳಿದಿರೋ ಪುಸ್ತಕಾನೆಲ್ಲಾ ನಮ್ಮನೇ ಗರಾಜಿನ ಅಟ್ಟದ ಮೇಲೆ ಪೇರಿಸಿ ಇಟ್ಟಿದ್ದೆ. ಮೊನ್ನೆ ಲೇಟೆಸ್ಟ್ ಬ್ಯಾಚ್ ಹಿಂತಿರುಗಿ ಬಂದ ಪುಸ್ತಕಗಳನ್ನ ಅಟ್ಟದ ಮೇಲೆ ರವಾನಿಸಿದ್ದೆ. ನಿನ್ನೆ ರಾತ್ರಿ ಒಂದು ಹೊತ್ತಿನಲ್ಲಿ ಏನೋ 'ಲಟ ಲಟ' ಅಂತ ಸದ್ದಾಯಿತು. ಓಡಿ ಹೋಗಿ ಗರಾಜಿನ ಬಾಗಿಲು ತೆಗೆದು ನೋಡಿದರೆ ಅಟ್ಟ ಕುಸಿದು ಬಿದ್ದಿದೆ. ಗರಾಜಿನಲ್ಲಿ ಪುಸ್ತಕಗಳ ಮಹಾ ಸಾಗರ. ಅವುಗಳ ಮಧ್ಯೆ, ಸಮುದ್ರ ಮಥನದಲ್ಲಿ ಲಕ್ಷ್ಮಿ ಉದ್ಭವಿಸಿದಂತೆ ನನ್ನ ಹೊಸ ಬಜಾಜ್ ಸ್ಕೂಟರ್ ನಿಂತಿತ್ತು. ಹೆಡ್ ಲೈಟ್ ಎಲ್ಲಾ ಪುಡಿ ಪುಡಿ. ಬೆಳಗಿನ ಹೊತ್ತು ಸ್ಕೂಟರ್ ತೆಗೆಯುವಾಗ ಹೀಗಾಗಿದ್ರೆ ಮೈ ಮೂಳೆ ಎಲ್ಲಾ ಮುರೀತಿತ್ತು."

"ಈ ಕಾಗದದ ಪುಸ್ತಕ ಪ್ರಕಾಶನ ನಿಲ್ಲಿಸ್ಬಿಡು ಸುಬ್ಬು. ಮೈಕ್ರೊ ಫಿಲ್ಮ್‌ನಲ್ಲಿ ಮಾಡಿದ್ರೆ, ಒಂದು ಸಣ್ಣ ಪಿ.ಜಿ ಚೀಟಿಯಲ್ಲಿ ಸಂಪೂರ್ಣ ಪುಸ್ತಕ ಪ್ರಿಂಟಿಸಬಹುದು. ಭಾರಾನೇ ಇರೋದಿಲ್ಲ" ಅಂತ ನನ್ನ ಹೈ ಟೆಕ್ ಸಲಹೆ ನೀಡಿದೆ.

"ಮೈಕ್ರೊ ಫಿಲ್ಮ್ ಪುಸ್ತಕಾನ ಯಾರು ಕೊಳ್ಳುತ್ತಾರೆ ?" ಸುಬ್ಬು ಪ್ರಶ್ನೆ.

"ಈಗಿನ ಪುಸ್ತಕಗಳನ್ನ ಕೊಳ್ಳೋರು ಇದ್ದಿದ್ರೆ ನಿನ್ನ ಅಟ್ಟ ಯಾಕೆ ಮುರೀತಿತ್ತು ?" ಅಂತ ಸಮಜಾಯಿಷಿ ನೀಡಿದೆ.

ಋಣಗಳು

ಬನಶಂಕರಿ ಸೆಕೆಂಡ್ ಸ್ಟೇಜ್‌ನಲ್ಲಿ ಯಾವುದೋ ಗೃಹ ಪ್ರವೇಶಕ್ಕೆ ಹೋಗಿದ್ದೆ. ಸತ್ಯನಾರಾಯಣ ಪೂಜೆ ಇನ್ನೂ ಆಗ್ತಾ ಇತ್ತು. ಬಂದೋರೆಲ್ಲಾ ಕೂತ್ಕೊಳ್ಳೋಕೆ ಅಂತ ಮನೆ ಸೂರಿನ ಮೇಲೆ ಶಾಮಿಯಾನಾ ಹಾಕಿ ಕುರ್ಚಿ ಇಟ್ಟಿದ್ದರು. SIT-OUT ಅಂತಾರಲ್ಲಾ ಹಾಗೆ ಅದೊಂದು ತರಹಾ SIT-UP. ಆಗಲೇ ಒಂದು ಗುಂಪು ಹರಟೆಯಲ್ಲಿ ಮಗ್ನವಾಗಿತ್ತು. ಒಂದು ಕುರ್ಚಿ ಎಳೆದುಕೊಂಡು ನಾನೂ ಸೇರಿಕೊಂಡೆ. ಯಾರೋ ಒಬ್ಬ ಮುದುಕರು, ಹಿಂದಿನ ತಲೆಮಾರಿನ ಮಹನೀಯರ ವಿಷಯ ಮಾತಾಡ್ತಾ ಇದ್ರು.

"ಆಗಿನ ಕಾಲದ ಮೌಲ್ಯಗಳೇ ಬೇರೆ ಇದ್ವು ಬಿಡಿ. ಮನುಷ್ಯ ಹುಟ್ತಾನೇ ಋಣಗಳನ್ನ ಹೊತ್ಕೊಂಡೇ ಹುಟ್ತಾನಂತೆ. ಸಾಯುಕ್ಕೆ ಮುಂಚೆ ಈ ಋಣಗಳನ್ನ ತೀರಿಸ್ಕೊಂಡೇ ಹೋಗಬೇಕು ಅಂತ ಆಗಿನವರ ಛಲ ರಾಶಿಯವರು ಒಮ್ಮೆ ಹೇಳ್ತಾ ಇದ್ದ ಹಾಗೆ, ಒಂದು ಒಳ್ಳೇ ಪುಸ್ತಕಾನ ಓದಿ ಆನಂದಿಸಿದರೆ ಸಾಲದು. ಆ ಜ್ಞಾನ ಋಣ ತೀರಿಸಬೇಕಾದರೆ, ನೀನೂ ಅಂತಹದೇ ಪುಸ್ತಕಗಳನ್ನ ಬರೆದು, ಆ ಆನಂದಾನ ಹಂಚಿಕೋಬೇಕು. ಆಗಲೇ ಬಾಳು ಸಾರ್ಥಕ ಅಂತ. ಇನ್ನೊಮ್ಮೆ ಅವರೇ ಹೇಳಿದ್ದು— ಕೈಲಾಸಂ ಜೊತೆಯಲ್ಲಿ ಅನುಭವಿಸಿದ ಹಾಸ್ಯ ರಸ ನಿಮಿಷಗಳ ಋಣ ತೀರಿಸೋದಕ್ಕೋಸ್ಕರ ಕೊರವಂಜಿ ಶುರುಮಾಡ್ದೆ. ಅದು ಒಂದು ರೀತಿಯಲ್ಲಿ ಋಣ ಪರಿಹಾರ ಕಾರ್ಯಕ್ರಮ ಅಂತ...." ಅಷ್ಟು ಹೊತ್ತಿಗೆ ಸತ್ಯನಾರಾಯಣ ಪೂಜೆ ಮುಗಿಸಿ, ಮನೆ ಯಜಮಾನ ಆಗಮಿಸಿದ.

"ಏನು ಮಾತು ಕಥೆ ಜೋರಾಗಿದೆಯಲ್ಲಾ ?"

"ಇಲ್ಲ, ಇಲ್ಲ, ಅಂಥಾದ್ದೇನಿಲ್ಲ. ಋಣಗಳು ಮತ್ತು ಅವುಗಳ ಪರಿಹಾರದ ಬಗ್ಗೆ ಮಾತಾಡ್ತಾ ಇದ್ವಿ...."

“ಅಯ್ಯೋ, ಯಾಕೆ ಹೇಳ್ತಿ ಮಹರಾಯ, ಈ ಮನೆ ಕಟ್ಟಿಸೋಕ್ಕೆ ಎಲ್.ಐ.ಸಿ. ಸಾಲ ತೊಗೊಂಡೆ. ಕೆ.ಎಸ್.ಎಫ್.ಸಿ. ಸಾಲದಲ್ಲಿ ಮಗಳ ಮದುವೆ ಮಾಡ್ದೆ. ಈಗ ಸಾಯೋವರ್ಗೂ ದುಡಿದು ಈ ಸಾಲ ಎಲ್ಲಾ ತೀರಿಸಬೇಕು. ಮಕ್ಕಳ ತಲೇ ಮೇಲೆ ಸಾಲದ ಹೊರೆ ಹೊರಿಸೋ ಹಾಗೆ ಆಗದಿದ್ರೆ ಅದೇ ನನ್ನ ಪುಣ್ಯ” ಅಂತ ಮಾತು ಸೇರಿಸಿದರು.

ಒಂದನೇ ಕ್ಲಾಸ್ ಬಾಲಬೋಧೆಯಲ್ಲಿ ಒಂದು ಸಾಲು ಬರುತ್ತೆ. “ಆಗ ಆ ಆಟ—ಈಗ ಈ ಆಟ” ಅಂತ. ಅದನ್ನೇ ಸ್ವಲ್ಪ ಬದಲಿಸಿ, ಆಗ ಆ ಋಣ—ಈಗ ಈ ಋಣ ಅಂತ ಮನಸ್ಸಿನಲ್ಲೇ ಅಂದುಕೊಂಡೆ.

ನಿಶಿರಾತ್ರಿ ಎರಡು ಗಂಟೆಯ ಹೊತ್ತಿನಲ್ಲಿ ಡಾಕ್ಟರ ಮನೆ ಬಾಗಿಲನ್ನು ಧಡ ಧಡ ತಟ್ಟಿದ. ಡಾಕ್ಟರು ಬಾಗಿಲು ತೆರೆದಾಗ ಅವ ಹೇಳಿದ ತಕ್ಷಣ “ಬನ್ನಿ ಡಾಕ್ಟರೇ ! ನನ್ನ ಮಗುವಿಗೆ ತುಂಬಾ ಕಷ್ಟವಾಗಿದೆ. ಉಸಿರಾಡಲೇ ಆಗುತ್ತಿಲ್ಲ”ಎಂದು.ಡಾಕ್ಟರು ಬಟ್ಟೆ ಹಾಕಿಕೊಂಡು ಮೋಟಾರು ತೆಗೆದುಕೊಂಡು ಅವನೊಡನೆ ಹೊರಟರು. ವಿಸಿಟ್ಟಿಗೆ ಹತ್ತು ರೂಪಾಯಿ ನನ್ನ ಫೀಜು ಗೊತ್ತಲ್ಲ ಅಂದರು. ಹ್ಞೂ ಅಂದ ಅವ. 8 ಮೈಲಿ ಹೋದ ಮೇಲೆ ಮನೆಯೊಂದನ್ನು ತೋರಿಸಿದಾಗ ಡಾಕ್ಟರು ಮೋಟಾರು ನಿಲ್ಲಿಸಿದರು, ಅವ ಡಾಕ್ಟರ ಕೈಲಿ ಹತ್ತು ರೂಪಾಯಿ ನೋಟಿಟ್ಟ. ನಿಮ್ಮ ಫೀಜು ಕೊಟ್ಟಿದೀನಿ. ತುಂಬಾ ವಂದನೆ ಎಂದ. ರೋಗಿ ಎಲ್ಲಯ್ಯಾ ಎಂದರು ಡಾಕ್ಟರು, ರೋಗಿ ಯಾರೂ ಇಲ್ಲ ಡಾಕ್ಟರೇ. ಟ್ಯಾಕ್ಸಿ ಸಿಗಲಿಲ್ಲ ಅದಕ್ಕೇ ನಿಮಗೆ ತೊಂದರೆ ಕೊಡಬೇಕಾಯ್ತು.

ಶುಭಾಶಯಗಳೊಂದಿಗೆ


ಸ್ಪ್ರೇಸ್ ಕ್ರೀಟ್

ಪೀಣ್ಯ ಮೂರನೆಯ ಹಂತ, ಪೀಣ್ಯ,
ಬೆಂಗೂರು–560058

ದೂರವಾಣಿ : 608186
609026

ಓಂಕಾರ್ ಆಫ್ಸೆಟ್ ಪ್ರಿಂಟರ್ಸ್
ಅಂಡ್ ಫೋಟೋ ಟೈಪ್ ಸೆಟರ್ಸ್

33, 1ನೇ ಮುಖ್ಯ ರಸ್ತೆ, ಹೊಸ ತರಗುಪೇಟೆ,
ಬೆಂಗಳೂರು–560002.



REGISTERED No. BGW-180

ಶುಭಾಶಯಗಳೊಂದಿಗೆ

Printed by V.R. NATH for the Publisher M. SHIVA KUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS. 404, Sampige Road, Malleswaram, Bangalore-560 003. Editor : M. SHIVA KUMAR